ಪ್ರಯತ್ನವು ಮುರಿದು ಯುದ್ಧವು ಅನಿವಾರ್ಯ ಎಂಬ ಸನ್ನಿವೇಶವುಂಟಾದಾಗ ವಿದುರನು ಧೃತರಾಷ್ಟ್ರನನ್ನು ಕಂಡು ನೀನು ಮಗನ ಮೇಲಿನ ಮೋಹದಿಂದ ಅವನು ಮಾಡಿದ ಅಧರ್ಮಕಾರ್ಯಗಳನ್ನೆಲ್ಲ ಒಪ್ಪಿಕೊಳ್ಳುತ್ತ ಬಂದಿರುವಿ. ನಿನ್ನ ಮಗನು ಪರಮಾತ್ಮ ದ್ವೇಷಿಯಾಗಿದ್ದಾನೆ. ಇವನನ್ನು ಬಿಟ್ಟುಬಿಡು. ಪಾಂಡವರಿಗೆ ಅವರಿಗೆ ಸಲ್ಲಬೇಕಾದ ರಾಜ್ಯದ ಭಾಗವನ್ನು ಕೊಟ್ಟುಬಿಡು ಎಂದು ಉಪದೇಶಿಸುವನು. ಇದನ್ನು ತಿಳಿದ ದುರ್ಯೋಧನನು ವಿದುರನಿಗೆ ಅವಮಾನ ಮಾಡಿ ಇವನನ್ನು ನಗರದಿಂದ ಹೊರಗೆ ಹಾಕಿರಿ ಎನ್ನುವನು. ಇದರಿಂದ ನೊಂದುಕೊಂಡ ವಿದುರನು ತೀರ್ಥಯಾತ್ರೆಗೆ ಹೊರಡುವನು. ಅನೇಕ ನದಿಗಳು ಕ್ಷೇತ್ರಗಳು ವನೋಪವನಗಳಲ್ಲಿ ಸಂಚರಿಸುತ್ತ ವಿದುರನು ಪ್ರಭಾಸಕ್ಷೇತ್ರಕ್ಕೆ ಬರುವನು. ಅಲ್ಲಿಗೆ ಬಂದಾಗ ಯಾದವರು ಪರಸ್ಪರ ಕಲಹಮಾಡಿ ನಾಶಹೊಂದಿದ್ದನ್ನು ಕೇಳಿ ಅಲ್ಲಿಂದ ಸರಸ್ವತೀನದಿಯ ತೀರಕ್ಕೆ ಹೋಗುವನು. ಮುಂದೆ ಯಮುನಾತೀರಕ್ಕೆ ಹೋಗಿ ಅಲ್ಲಿ ಉದ್ಧವನನ್ನು ಕಾಣುವನು. ಪ್ರಭಾಸದಲ್ಲಿ ಕೇಳಿದ ಯಾದವರ ಕಲಹದ ವಿಷಯವನ್ನು ಉದ್ಧವನಿಂದ ವಿವರವಾಗಿ ತಿಳಿದುಕೊಳ್ಳುವನು. ಶ್ರೀಕೃಷ್ಣನ ಪರಿವಾರದವರಲ್ಲಿ ಒಬ್ಬೊಬ್ಬರ ಹೆಸರನ್ನೂ ಹೇಳಿ ಅವರ ಯೋಗಕ್ಷೇಮವನ್ನೂ ಶ್ರೀಕೃಷ್ಣನ ಯೋಗಕ್ಷೇಮವನ್ನೂ ಕೇಳಿದ ವಿದುರನಿಗೆ ಉತ್ತರ ಹೇಳಲು ಉದ್ಧವನಿಗೆ ಮಾತೇ ಹೊರಡುವುದಿಲ್ಲ. ಶ್ರೀಕೃಷ್ಣನ ಸಮಗ್ರ ಚರಿತ್ರೆಯಲ್ಲಿ ಒಂದೊಂದೂ ಘಟನೆಯನ್ನು ನೆನಪುಮಾಡಿಕೊಂಡು ದುಃಖಿಸುವನು. ಕಂಸನ ಕಾರಾಗೃಹದಲ್ಲಿ ಶ್ರೀಕೃಷ್ಣನ ಅವತಾರ, ನಂದಗೋಕುಲದಲ್ಲಿಯ ಬಾಲಲೀಲೆಗಳು, ಪೂತನಾ, ಶಕಟಾಸುರ ಮೊದಲಾದವರ ಸಂಹಾರ, ಕಂಸವಧೆ, ಗೋವರ್ಧನ ಗಿರಿಯನ್ನು ಎತ್ತಿ ಹಿಡಿದುದು. ಕಾಲಿಯ ಮರ್ದನನ ಸಂಹಾರ, ರುಕ್ಮಿಣೀ ಸ್ವಯಂವರ, ನರಕಾಸುರವಧೆ, ಪಾಂಡವರ ಕಷ್ಟಗಳನ್ನೆಲ್ಲ ಪರಿಹಾರ ಮಾಡಿದ್ದು, ಗೀತೋಪದೇಶ ಹೀಗೆ ಶ್ರೀಕೃಷ್ಣನ ಸಮಗ್ರ ಚರಿತ್ರೆಯನ್ನು ನೆನಪುಮಾಡಿಕೊಂಡು ಉದ್ಧವನು ದುಃಖಿಸುವನು. ಪ್ರಭಾಸದಲ್ಲಿ ಯಾದವರು ಪರಸ್ಪರ ಕಲಹ ಮಾಡಿ ಮಡಿದುದನ್ನು ತಿಳಿಸುವನು. ಶ್ರೀಕೃಷ್ಣನು ಪರಂಧಾಮವನ್ನೈದುದನ್ನು ತಿಳಿಸುವನು. ಉಳಿದ ಎಲ್ಲ ಯಾದವರು ಮೃತರಾದರೂ ಉದ್ಧವನು ಮಾತ್ರ ಭಗವಂತನು ಅವನಿಗೆ ರಹಸ್ಯವಾಗಿ ಉಪದೇಶಿಸಿದ ಜ್ಞಾನವು ಸಜ್ಜನರಿಗೆ ದೊರಕಲಿ ಎಂದು ಉಳಿಯುವಂತೆ ಮಾಡಿದನು.

ಅಸ್ಮಾತ್ ಲೋಕಾತ್ ಉಪರತೇ ಮಯಿ ಜ್ಞಾನಂ ಮದಾಶ್ರಯಮ್ ।
ಅರ್ಹತ್ಯುದ್ಧವ ಏವಾದ್ಧಾ ಸಂಪ್ರತ್ಯಾತ್ಮವತಾಂ ಪರಃ ।
ಅತೋ ಮದ್ವಯ್ ಪುನರ್ಲೋಕಂ ಗ್ರಾಹಯನ್ನಿಹ ತಿಷ್ಠತು ॥ (4-30)

ಪರಮಾತ್ಮನ ಈ ಸಂಕಲ್ಪದಂತೆ ನಾನು ಬದರಿಕಾಶ್ರಮಕ್ಕೆ ಹೋಗುವೆನು ಎಂದು ಉದ್ಧವನು ಬದರಿಕಾಶ್ರಮಕ್ಕೆ ತೆರಳುವನು. ವಿದುರನೂ ಕೂಡ ಉದ್ಧವನ ಸೂಚನೆಯಂತೆ. ಮೈತ್ರೇಯರಿಂದ ಹೆಚ್ಚಿನ ಜ್ಞಾನವನ್ನು ಪಡೆಯಲು ಗಂಗಾತೀರದಲ್ಲಿರುವ ಮೈತ್ರೇಯರ ಆಶ್ರಮಕ್ಕೆ ಹೋಗುವನು.

ವಿದುರ-ಮೈತ್ರೇಯರ ಸಮಾಗಮ

ಗಂಗಾತೀರದಲ್ಲಿ ಆಸೀನನಾದ ಮೈತ್ರೇಯರಿಗೆ ವಿದುರನು 'ಈ ಲೋಕದಲ್ಲಿ ಸುಖ ಪಡಬೇಕೆಂದು ಜನರು ನಾನಾ ಕರ್ಮಗಳಲ್ಲಿ ತೊಡಗುವರು. ಆದರೆ ಸುಖವು ದೊರೆಯುವುದಿಲ್ಲ. ಆದ್ದರಿಂದ ಸಾಧುಶ್ರೇಷ್ಠನೇ ಸುಖವನ್ನು ಪಡೆಯುವ ಉಪಾಯವನ್ನು ಬೋಧಿಸು ಎಂದು ಪ್ರಾರ್ಥಿಸುವನು.

ಸುಖಾಯ ಕರ್ಮಾಣಿ ಕರೋತಿ ಲೋಕಃ ನ ತೈಃ ಸುಖಮ್ ನಾನ್ಯದುಪಾರಮಂ ವಾ ।
ತತ್ಸಾಧು ವರ್ಯಾದಿಶ ಶರ್ಮವರ್ತ್ಮ ಸಂರಾಧಿತೋ ಭಗವಾನ್ ಯೇನ ಪುಂಸಾಮ್ ॥ (5-2)

ಈ ಪ್ರಶ್ನೆಗೆ ಉತ್ತರ ದೊರೆಯ ಬೇಕಾದರೆ ಭಗವಂತನ ಸಮಗ್ರ ಮಹಿಮೆಯನ್ನು ತಿಳಿಯುವುದು ಅಗತ್ಯ. ಆದ್ದರಿಂದ ಮೈತ್ರೇಯರು ಭಗವಂತನ ಸೃಷ್ಟಿಕರ್ತೃತ್ವ ಮಹಿಮೆಯನ್ನು ನಿರೂಪಿಸಲು ಆರಂಭಿಸುವರು.

ಗುಣತ್ರಯದ, ಮಹತ್ ತತ್ತ್ವಾದಿ ತತ್ವಗಳ ಮತ್ತು ಬ್ರಹ್ಮಾಂಡದ ಸೃಷ್ಟಿಯ ವರ್ಣನೆ

ಸೃಷ್ಟಿಯ ಆರಂಭಕ್ಕಿಂತ ಮೊದಲು ಪರಮಾತ್ಮನು ಒಬ್ಬನೇ ಅನಂತಶಕ್ತಿಯುಳ್ಳವನಾಗಿ ಸ್ವೇಚ್ಛಾ ವಿಹಾರವುಳ್ಳವನಾಗಿ ಇದ್ದನು. ಜಡಜಗತ್ತು ಪ್ರಕೃತಿಯಲ್ಲಿ ಲೀನವಾಗಿತ್ತು. ಜೀವರು ಪರಮಾತ್ಮನ ಉದರದಲ್ಲಿದ್ದರು. ಪರಮಾತ್ಮನು

ಸೃಷ್ಟಿಯನ್ನು ಮಾಡಬೇಕೆಂಬ ಸಂಕಲ್ಪವುಳ್ಳವನಾಗಿ ಮೂಲಪ್ರಕೃತಿಯಲ್ಲಿ ಪ್ರವೇಶ ಮಾಡಿ ಅದರಲ್ಲಿ ಪರಿಣಾಮವನ್ನುಂಟುಮಾಡಿ ಸತ್ವ, ರಜಸ್, ತಮಸ್ ಎಂಬ ಗುಣತ್ರಯಗಳನ್ನು ಸೃಷ್ಟಿಸಿದನು. ಬಳಿಕ ಮಹತ್ ತತ್ವವನ್ನೂ ಅದಕ್ಕೆ ಅಭಿಮಾನಿಯಾದ ವಿರಿಂಚನನ್ನೂ ಸೃಷ್ಟಿಸಿದನು. ಮಹತತ್ತ್ವವು ವಿರಿಂಚನ ಶರೀರ ರೂಪವಾದುದು. ಮಹತ್‌ತತ್ವದಿಂದ ಅಹಂಕಾರತತ್ವವನ್ನು ಸೃಷ್ಟಿಸಿದನು. ಇದಕ್ಕೆ ಶಿವನು ಅಭಿಮಾನಿಯು. ಇದು ಶಿವನ ಶರೀರ ಈ ಅಹಂಕಾರತತ್ವವು ವೈಕಾರಿಕ, ತೈಜಸ, ತಾಮಸ ಎಂದು ಮೂರು ವಿಧವಾದುದು. ವೈಕಾರಿಕ ಅಹಂಕಾರದಿಂದ ತತ್ವದೇವತೆಗಳ ದೇಹಗಳನ್ನೂ ಮನಸ್ತತ್ವವನ್ನೂ ಸೃಷ್ಟಿಸಿದನು. ತೈಜಸ ಅಹಂಕಾರದಿಂದ ಹತ್ತು ಇಂದ್ರಿಯಗಳನ್ನೂ ತಾಮಸ ಅಹಂಕಾರದಿಂದ ಆಕಾಶವನ್ನೂ ಶಬ್ದತತ್ವವನ್ನೂ ಸೃಷ್ಟಿಸಿದನು. ಆಕಾಶದಿಂದ ವಾಯುವನ್ನು ವಾಯುವಿನಿಂದ ತೇಜಸ್ಸನ್ನು ತೇಜಸ್ಸಿನಿಂದ ಜಲವನ್ನು ಜಲದಿಂದ ಪೃಥ್ವಿಯನ್ನೂ ಸೃಷ್ಟಿಸಿದನು. ಈ ಎಲ್ಲ ತತ್ವಗಳ ಅಭಿಮಾನಿ ದೇವತೆಗಳನ್ನೂ ಸೃಷ್ಟಿಸಿದನು. ಈ ಎಲ್ಲ ತತ್ವದೇವತೆಗಳು ತಾವು ಅಭಿಮಾನಿಗಳಾಗಿರುವ ತತ್ತ್ವಗಳನ್ನೆಲ್ಲ ಜೋಡಿಸಿ ಬ್ರಹ್ಮಾಂಡವನ್ನು ಯೋಜಿಸಲು ಸಮರ್ಥರಾಗಲಿಲ್ಲ. ಆಗ ಪರಮಾತ್ಮನು ಬ್ರಹ್ಮಾಂಡವನ್ನು ಸೃಷ್ಟಿಸಿ ತಾನು ಪ್ರವೇಶಮಾಡಿ ವಿರಿಂಚನನ್ನೂ ಈ ಎಲ್ಲ ತತ್ವ ದೇವತೆಗಳನ್ನೂ ಅದರಲ್ಲಿ ಪ್ರವೇಶಿಸಿದನು.

ಭಗವಾನೇಕ ಏವಾಸೇದಮಗ್ರ ಆತ್ಮಾತ್ಮನಾಂ ವಿಭುಃ ।
ಆತ್ಮೇಚ್ಛಾನುಗತೋಹ್ಯಾತ್ಮಾ ನಾನಾಶಕ್ತ್ಯು ಪಲಕ್ಷಿತಃ ॥ (6-1)

ಆತ್ಮಾನಂ ವ್ಯಕರೋದಾತ್ಮಾ ವಿಶ್ವಸ್ಯಾಸ್ಯ ಸಿಸೃಕ್ಷಯಾ । (6-6)

ಮಹತ್ತತ್ತ್ವಾದ್ ವಿಕುರ್ವಾಣಾದಹಂ ತತ್ವಮಜಾಯತ ।
ವೈಕಾರಿಕಃ ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿಧಾ ॥ (6-7)

ಅಹಂತತ್ವಾದ್ವಿಕುರ್ವಾಣಾನ್ಮನೋ ವೈಕಾರಿಕಾದಭೂತ್ । (6-8)

ತೈಜಸಾನೀಂದ್ರಿಯಾಣ್ಯೇವ ಜ್ಞಾನಕರ್ಮಮಯಾನಿಚ । (6-9)

ತಾಮಸೋಭೂತಸೂಕ್ಷ್ಮಾದಿಃ ಯತಃ ಖಂ ಲಿಂಗಮಾತ್ಮನಃ । (6-10)

ಏತೇ ದೇವಾಃ ಕಲಾಃ ವಿಷ್ಣೋಃ ಕಾಲಮಾಯಾಂಶಲಿಂಗಿನಃ
ನಾನಾತ್ವಾತ್ ಸ್ವಕ್ರಿಯಾನೀಶಾಃ ಪ್ರೋಚುಃ ಪ್ರಾಂಜಲಯೋ ವಿಭುಮ್ । (6-16)

ಇತಿ ತಾಸಾಂ ಸ್ವಶಕ್ತೀನಾಮಸತೀನಾಂ ಸಮೇತ್ಯಸಃ ।

ಪ್ರಸುಪ್ತಲೋಕತಂತ್ರಾಣಾಂ ನಿಶಮ್ಯಗಿರಮೀಶ್ವರಃ । (7-1)

ತ್ರಯೋವಿಂಶತಿತತ್ವಾನಾಂ ಗಣಂ ಯುಗ ಪದಾವಿಶತ್ । (7-2)

ಪರಮಾತ್ಮನು ಬ್ರಹ್ಮಾಂಡರೂಪವಾದ ವಿರಿಂಚನ ಶರೀರದಲ್ಲಿ ಪ್ರವೇಶಮಾಡಿದ ಮೇಲೆ ಆ ಶರೀರದ ಆಯಾ ಅವಯವಗಳು ಮಾಡುವಂತೆಯೂ ಅವುಗಳ ಅಭಿಮಾನಿ ದೇವತೆಗಳೂ ಅಲ್ಲಿರುವಂತೆಯೂ ಮಾಡಿದನು. ಈ ಅವಯವಗಳ ಮತ್ತು ಅವುಗಳ ದೇವತೆಗಳ ವಿವರ ಈ ಕೆಳಗಿನಂತಿದೆ.

ಮುಖ-ಅಗ್ನಿ, ಜಿಹ್ವಾ-ವರುಣ, ನಾಸಿಕಾ-ಅಶ್ವಿನೀ, ಚಕ್ಷುಸ್-ಸೂರ್ಯ, ಶ್ರೋತ್ರ-ದಿಗ್ದೇವತೆಗಳು, ತ್ವಕ್-ಔಷಧಿ ದೇವತೆಗಳು, ಗುಹ್ಯೇಂದ್ರಿಯ-ದಕ್ಷ ಪ್ರಜಾಪತಿ, ಪಾಯು-ಮಿತ್ರ, ಹಸ್ತ-ಇಂದ್ರ, ಪಾದ-ಜಯಂತ, ಹೃದಯ-ಚಂದ್ರ, ನಾಡೀ-ಬೃಹಸ್ಪತಿ -ಹೀಗೆ ಬ್ರಹ್ಮಾಂಡವೆಂಬ ಬ್ರಹ್ಮನ ಶರೀರದ ಅವಯವಗಳುಂಟಾಗಿ ಆಯಾ ದೇವತೆಗಳು ನೆಲೆಸಿದರು. ಯಜ್ಞನಾಮಕ ಹರಿಯು ಪಾದದ ಹೆಬ್ಬೆರಳಿನ ಮೂಲದಲ್ಲಿದ್ದು ಸರ್ವಾಧಾರನಾಗಿರುವನು.

ಈ ವಿರಾಟನ ತಲೆಯಿಂದ ದ್ಯುಲೋಕವೂ ಪಾದಗಳಿಂದ ಭೂಲೋಕವೂ ನಾಭಿಯಿಂದ ಆಕಾಶವೂ ಹುಟ್ಟಿದವು.

ಈ ಬ್ರಹ್ಮನ ಅಂತರ್ಯಾಮಿಯಾದ ಪುರುಷನ ಮುಖದಿಂದ ಬ್ರಾಹ್ಮಣರೂ ಬಾಹುಗಳಿಂದ ಕ್ಷತ್ರಿಯರೂ ತೊಡೆಗಳಿಂದ ವೈಶ್ಯರೂ ಪಾದಗಳಿಂದ ಶೂದ್ರರೂ ಜನಿಸಿದರು. ಈ ಎಲ್ಲ ವರ್ಣದವರೂ ತಮ್ಮ ತಮ್ಮ ಸ್ವಧರ್ಮ-ಗಳಿಂದ ಭಗವಂತನನ್ನು ಭಜಿಸಿ ಪುನೀತರಾಗುವರು.

ಸೃಷ್ಟಿಯ ಈ ವಿವರಗಳನ್ನು ತಿಳಿದುಕೊಂಡ ನಂತರ ವಿದುರನು ಮತ್ತೆ ಪ್ರಶ್ನೆ ಮಾಡುವನು. 'ಭಗವಂತನು ಚಿನ್ಮಾತ್ರನೂ ವಿಕಾರರಹಿತನೂ ಎಂದು ಹೇಳಲ್ಪಡುತ್ತಾನೆ. ಆದ್ದರಿಂದ ಗುಣಕ್ರಿಯಾದಿ ಸಂಬಂಧಗಳು ಬರುವ ಈ ಸೃಷ್ಟ್ಯಾದಿಕ್ರೀಡೆಗಳನ್ನು ಅವನು ಮಾಡುವನು ಎಂಬುದು ಹೀಗೆ ಉಪಪನ್ನವಾಗುವುದು ? ಸ್ವತಃ ತೃಪ್ತನಾದ ಅವನಿಗೆ ಈ ಕಾರ್ಯಗಳೇಕೆ ?

ಬ್ರಹ್ಮನ್ ಕಥಂ ಭಗವತಃ ಚಿನ್ಮಾತ್ರಸ್ಯ ಅವಿಕಾರಿಣಃ ।
ಲೀಲಯಾಚಾಪಿ ಯುಜ್ಯೇರನ್ ನಿರ್ಗುಣಸ್ಯ ಗುಣಾಃ ಕ್ರಿಯಾಃ ।
ಸ್ವತಃ ತೃಪ್ತಸ್ಯ ತು ಕಥಂ ನಿರ್ವೃತಸ್ಯ ಮಹಾತ್ಮನಃ ॥ (8-2, 3)

ಈ ಪ್ರಶ್ನೆಗೆ ಮೈತ್ರೇಯರ ಉತ್ತರ ಹೀಗಿದೆ. ಪರಮಾತ್ಮನು ತನಗೆ ಅಧೀನವಾದ ಪ್ರಕೃತಿಯನ್ನು ಸಾಧನ-ವಾಗಿಟ್ಟುಕೊಂಡು ಸೃಷ್ಟ್ಯಾದಿಗಳನ್ನು ಮಾಡುವನು. ದೇಶತಃ ಕಾಲತಃ ಅವಸ್ಥಾತಃ ಅನಂತನಾದ ಸರ್ವಜ್ಞನಾದ ಅವನಿಗೆ ಈ ಪ್ರಕೃತಿಯು ಅಂಟಿಕೊಳ್ಳಲಾರದು. ಆದ್ದರಿಂದ ಅವನ ಚಿನ್ಮಾತ್ರಸ್ವರೂಪಕ್ಕೆ ಮತ್ತು ಅವಿಕಾರ ಸ್ವರೂಪಕ್ಕೆ ಯಾವ ಚ್ಯುತಿಯೂ ಇಲ್ಲ.

ದೇಶತಃ ಕಾಲತಃ ಯೋ ಸಾವಸ್ಥಾತಃ ಸ್ವತೋಽನ್ಯತಃ ।
ಅವಿಲುಪ್ತಾವಬೋಧಾತ್ಮಾ ಸ ಯುಜ್ಯೇತಾಽಜಯಾ ಕಥಮ್ ?

ಭಗವಾನೇಷ ಏವೈಕಃ ಸರ್ವಕ್ಷೇತ್ರೇಷ್ವವಸ್ಥಿತಃ ।
ಅಮುಷ್ಯ ದುರ್ಭಗತ್ವಂ ವಾ ಕ್ಲೇಶೋವಾ ಕರ್ಮಭಿಃ ಕುತಃ ॥ (8-5, 6)

ಪ್ರಜಾಪತಿ, ಲೋಕಗಳು, ದೇವಪಿತೃ ಮನುಷ್ಯರು, ಯಜ್ಞಾದಿಗಳು, ಸಾಂಖ್ಯಯೋಗಾದಿಗಳ ಸೃಷ್ಟಿಯ ವಿಷಯದ ಪ್ರಶ್ನೆಗಳು

ಹೀಗೆ ಪರಮಾತ್ಮನು ಸೃಷ್ಟಿಕರ್ತನಾದರೂ ಸ್ವತಃ ವಿಕಾರರಹಿತನು ಎಂದು ತಿಳಿದುಕೊಂಡಮೇಲೆ ವಿದುರನು ಸೃಷ್ಟಿಯ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಲು ಪ್ರಶ್ನೆಗಳನ್ನು ಕೇಳುವನು.

ಪ್ರಜಾಪತಿನಾಂ ಸ ಪತಿಃ ಚಕ್ಲಪೇ ಕಾನ್ ಪ್ರಜಾಪತೀನ್
ಸರ್ಗಾಂಶ್ಚೈವಾನು ಸರ್ಗಾಂಶ್ಚ ಮನೂನ್ ಮನ್ವಂತರಾಧಿಪಾನ್
ಏತೇಷಾಮಪಿ ವಂಶಾಂಶ್ಚ ವಂಶಾನು ಚರಿತಾನಿಚ ।
ಉಪರ್ಯಧಶ್ಚ ಯೇ ಲೋಕಾಃ ಭೂಮೇರ್ಮಿತ್ರಾತ್ಮಜಾಸತೇ
ತೇಷಾಂ ಸಂಸ್ಥಾಂ ಪ್ರಮಾಣಂಚ ಭೂರ್ಲೋಕಸ್ಯ ಚ ವರ್ಣಯ ॥ (8-25, 26)

ಭಗವಂತನು ಮಹತ್ತತ್ತ್ವ ಮೊದಲಾದ ತತ್ತ್ವಗಳನ್ನು ಸೃಷ್ಟಿಸಿ ಅವುಗಳಿಂದ ಬ್ರಹ್ಮಾಂಡವನ್ನು ಸೃಷ್ಟಿಸಿ ಅದರಲ್ಲಿ ಪ್ರವೇಶಿಸಿ ಪ್ರಜಾಪತಿಗಳು ಮನುಗಳು ಅವರ ಮಕ್ಕಳು ಮೊಮ್ಮಕ್ಕಳು ಭೂಲೋಕ ಮತ್ತು ಅದರ ಮೇಲಿನ ಹಾಗೂ ಕೆಳಗಿನ ಲೋಕಗಳನ್ನು ಸೃಷ್ಟಿಸಿದ ವಿವರಗಳನ್ನು ತಿಳಿಸು.

ತಿರ್ಯಗ್ ಮಾನುಷದೇವಾನಾಂ ಸರೀಸೃಪ ಪತತ್ರಿಣಾಮ್ ।
ವದ ನಃ ಸರ್ಗಸಂವ್ಯೂಹಂ ಗರ್ಭಸ್ವೇದ ದ್ವಿಜೋದ್ಭಿದಾಮ್ ॥ (8-27)

ಋಷೀಣಾಂ ಜನ್ಮಕರ್ಮಾಣಿ ವೇದಸ್ಯ ಚ ವಿಕರ್ಷಣಮ್ ।
ಯಜ್ಞಸ್ಯ ಚ ವಿತಾನಾನಿ ಯೋಗಸ್ಯ ಚ ಪಥಃ ಪ್ರಭೋ

ನೈಷ್ಕರ್ಮ್ಯಸ್ಯ ಚ ಸಾಂಖ್ಯಸ್ಯ ತಂತ್ರಂಚ ಭಗವತ್ ಸ್ಮೃತಮ್
ವಾರ್ತಾಯಾಃ ದಂಡನೀತೇಶ್ಚ ಶ್ರುತಸ್ಯ ಚ ವಿಧಿಂ ಪೃಥಕ್
ಶ್ರಾದ್ಧಸ್ಯ ಚ ವಿಧಿಂ ಬ್ರಹ್ಮನ್ ಪಿತೃಣಾಂ ಸರ್ವಮೇವಚ
ಗ್ರಹನಕ್ಷತ್ರ ತಾರಾಣಾಂ ಕಲಾವಯವಸಂಸ್ಥಿತಿಮ್ । (8-31, 32, 33)

ಯೇನ ವಾ ಭಗವಾನ್ ತುಷ್ಯೇತ್ ಧರ್ಮಯೋನಿಃ ಜನಾರ್ದನಃ ।
ಸಂಪ್ರೀಸದತಿ ವಾ ಯೇಷಾಮೇತದಾಖ್ಯಾಹಿ ಮೇಽನಘ ॥

ಮನುಷ್ಯರು ದೇವತೆಗಳು ಪಶುಪಕ್ಷಿಗಳು ಇವೆಲ್ಲವುಗಳ ಜನ್ಮಕ್ರಮವನ್ನು ತಿಳಿಸು. ಋಷಿಗಳ ಜನ್ಮ ಮತ್ತು ಕಾರ್ಯಗಳನ್ನು ತಿಳಿಸು. ವೇದಗಳ ಆವಿಷ್ಕರಣ ಯಜ್ಞಯಾಗಾದಿಗಳನ್ನು ಮಾಡುವ ಕ್ರಮ, ಯೋಗಾನುಷ್ಠಾನ, ನಿಷ್ಕಾಮಕರ್ಮ, ಸಾಂಖ್ಯ, ಪಾಷಂಡಮತಗಳು, ವಾಣಿಜ್ಯ, ದಂಡನೀತಿ, ಜೀವರ ಗತಿ, ಶ್ರಾದ್ಧವಿಧಿ, ಗ್ರಹನಕ್ಷತ್ರಗಳ ಅವಸ್ಥಾನ ಹೀಗೆ ಯಾವ ಯಾವ ವಿಷಯಗಳನ್ನು ತಿಳಿದುಕೊಂಡರೆ ಭಗವಂತನಿಗೆ ಸಂತೋಷವಾಗುವುದೋ ಭಗವಂತನ ಪ್ರಸಾದವು ದೊರೆಯುವುದೋ ಅವೆಲ್ಲವನ್ನೂ ತಿಳಿಸು.

ವಿದುರನ ಈ ಪ್ರಶ್ನೆಗಳನ್ನು ಕೇಳಿ ಮೈತ್ರೇಯನು ಪುರುವಂಶದಲ್ಲಿ ಹುಟ್ಟಿದ ನೀನು ಮತ್ತೆ ಮತ್ತೆ ಭಗವಂತನ ಮಹಿಮೆಯ ಸ್ಮರಣೆಯಾಗುವಂಥ ಪ್ರಶ್ನೆಗಳನ್ನೇ ಕೇಳಿರುವಿ. ಆದ್ದರಿಂದ ಸ್ವತಃ ಭಗವಂತನೇ ಉಪದೇಶಿಸಿದ ಭಾಗವತ ಪುರಾಣದ ಸಾರವನ್ನೇ ನಿನಗೆ ಹೇಳುವೆನು. ಈ ಭಾಗವತದ ಉಪದೇಶವನ್ನು ಶೇಷದೇವರಿಂದ ಸನತ್‌ಕುಮಾರರು ಪಡೆದರು. ಅವರಿಂದ ಸಾಂಖ್ಯಾಯನರು ಪಡೆದರು. ಇವರು ಪರಾಶರರಿಗೆ ಹೇಳಿದರು. ಪರಾಶರರು ನನಗೆ ಉಪದೇಶಿಸಿದರು.

ಪ್ರೋಕ್ತಂ ಕಿಲೈತತ್ ಭಗವತ್ತಮೇನ ನಿವೃತ್ತಿಧರ್ಮಾಭಿರತಾಯ ತೇನ ।
ಸನತ್ಕುಮಾರಾಯ ಸಚಾಹ ಪೃಷ್ಟಃ ಸಾಂಖ್ಯಾಯನಾಯಾಥ ಧೃತವ್ರತಾಯ ।
ಸಾಂಖ್ಯಾಯನಃ ಪಾರಮಹಂಸ್ಯಮುಖ್ಯಃ ವಿವಕ್ಷಮಾಣೋ ಭಗವದ್ವಿಭೂತೀಃ ।
ಜಗಾದ ಸೋಽಸ್ಮದ್ಗುರವೇಽನ್ವಿತಾಯ ಪರಾಶರಾಯಾಥ ಬೃಹಸ್ಪತೇಶ್ಚ ।
ಪ್ರೋವಾಚ ಮಹ್ಯಂ ಸ ದಯಾಲುರುಕ್ತೋ ಮುನಿಃ ಪುಲಸ್ತ್ಯೇನ ಪುರಾಣಮಾದ್ಯಮ್ ॥ (9-7, 8, 9)

ಪ್ರಲಯಾನಂತರದ ಸೃಷ್ಟಿ, ವಿರಿಂಚನ ಸೃಷ್ಟಿ

ಪ್ರಲಯಕಾಲದಲ್ಲಿ ಶ್ರೀಹರಿಯು ಸರ್ಗಾದಿವ್ಯಾಪಾರಗಳಿಂದ ಉಪರಮಿಸಿ ಪ್ರಲಯಸಾಗರದಲ್ಲಿ ಶೇಷತಲ್ಪದಲ್ಲಿ ಯೋಗನಿದ್ರಾ ನಿರತನಾಗಿದ್ದನು. ಚರಾಚರ ಪ್ರಪಂಚವೆಲ್ಲ ಅವನ ಉದರದಲ್ಲಿ ಅಡಗಿತ್ತು, ಭಗವಂತನು ಸ್ವರಮಣ-ನಾದರೂ ಪ್ರಲಯಕಾಲಾತ್ಮಕ ಶಕ್ತಿರೂಪಿಣಿಯಾದ ರಮಾದೇವಿಯನ್ನು ಗಾಢಾಲಿಂಗನ ಮಾಡಿ ರಮಿಸುತ್ತಿದ್ದನು. ಈ ರೀತಿಯಾಗಿ ನಾಲ್ಕು ಯುಗಗಳ ಸಹಸ್ರಕಾಲ ಕಳೆದ ಮೇಲೆ ತನ್ನ ಉದರದಲ್ಲಿದ್ದ ಸಕಲ ಚರಾಚರಗಳನ್ನು ಸೃಷ್ಟಿಸಲು ಇಚ್ಛಿಸಿದನು.

ಉದಪ್ಲುತಂ ವಿಶ್ವಮಿದಂ ತದಾಸೀತ್ ಯನ್ನಿದ್ರಯಾ ಮೀಲಿತದೃಕ್ ನ್ಯಮೀಲಯತ್ ।
ಅಹೀಂದ್ರತಲ್ಪ ಅಧಿಶಯಾನ ಏಕಃ ಕೃತಕ್ಷಣಃ ಸ್ವಾತ್ಮರತಾವನೀಹಃ ।
ಸೋಂತಃ ಶರೀರೇಽರ್ಪಿತಭೂತಸೂಕ್ಷ್ಮಃ ಕಾಲಾತ್ಮಿಕಾಂ ಶಕ್ತಿಮುದೀರಯಾಣಃ ।
ಉವಾಸ ತಸ್ಮಿನ್ ಸಲಿಲೇ ಪದೇ ಸ್ವೇ ಯಥಾರುಣೋ ದಾರುಣಿ ರುದ್ಧವೀರ್ಯಃ ।
ಚತುರ್ಯುಗಾನಾಂ ಚ ಸಹಸ್ರಮಪ್ಸು ಸ್ವಪನ್ ತಯೋದೀರಿತಯಾ ಸ್ವಶಕ್ತ್ಯಾ ।
ಕಾಲಾಖ್ಯಯಾ ಸಾದಿತ ಕರ್ಮತಂತ್ರಃ ಲೋಕಾನಪೀಮಾನ್ ದದೃಶೇ ಸ್ವದೇಹೋ । (9-10, 11, 12)

ಕಾಲಕರ್ಮಗಳನ್ನು ನಿಮಿತ್ತಮಾಡಿಕೊಂಡು ಭಗವಂತನು ಸೃಷ್ಟಿಯನ್ನು ಮಾಡಲು ಇಚ್ಛಿಸಿದಾಗ ಅವನ ಉದರದಲ್ಲಿದ್ದ ಉದಕವು ಸೂಕ್ಷ್ಮ ರಜೋಗುಣದಿಂದ ಕೂಡಿ ಒಣಗಿ ಪದ್ಮರೂಪದಿಂದ ಅವನ ನಾಭಿಯಿಂದ ಹೊರಗೆ

ಬಂದಿತು. ಭಗವಂತನು ಈ ನಾಭಿಪದ್ಮವನ್ನು ಪ್ರವೇಶಿಸಿ ಸ್ವಯಂಭೂ, ವಿಧಾತಾ ಎಂಬ ಹೆಸರುಗಳಿಂದ ಪ್ರಸಿದ್ಧನಾದ ವಿರಿಂಚನನ್ನು ಸೃಷ್ಟಿಸಿದನು.

> **ತಸ್ಯಾತ್ಮಸೂಕ್ಷ್ಮಾಭಿನಿವಿಷ್ಟದೃಷ್ಟೇ ರಂತರ್ಗತೋಽರ್ಥೋ ರಜಸಾ ತನೀಯಾನ್**
> **ಗುಣೇನ ಕಾಲಾನುಗತೇನ ವಿದ್ಧ ಶುಷ್ಯಂಸ್ತದಾಭಿದ್ಯತ ನಾಭಿದೇಶಾತ್ ।**
> **ತಲ್ಲೋಕಪದ್ಮಂ ಸ ಉ ಏವ ವಿಷ್ಣುಃ ಪ್ರಾವೀವಿಶತ್ ಸರ್ವಗುಣಾವಭಾಸಮ್ ।**
> **ತಸ್ಮಿನ್ ಸ್ವಯಂ ವೇದಮಯೋ ವಿಧಾತಾ ಸ್ವಾಯಂಭುವಂ ಯಂ ಸ್ಮ ವದಂತಿ ಸೋಽಭೂತ್ ।** (9-13,15)

ಪರಮಾತ್ಮನ ನಾಭಿಯಿಂದ ಹುಟ್ಟಿದ ಈ ಪದ್ಮದಲ್ಲಿದ್ದ ವಿರಿಂಚನು ಲೋಕವನ್ನು ಕಾಣದೆ ನಾಲ್ಕೂ ಕಡೆಗೆ ತಿರುಗಿ ನೋಡಿದಾಗ ಅವನಿಗೆ ನಾಲ್ಕು ಮುಖಗಳು ಉಂಟಾದವು. ತನಗೂ ಈ ಪದ್ಮಕ್ಕೂ ಕಾರಣರಾದವರು ಯಾರು ಎಂದು ತಿಳಿದುಕೊಳ್ಳಲು ಅವನು ಪದ್ಮದ ನಾಳದೊಳಗಿನಿಂದ ಕೆಳಗಿರುವ ನೀರಿನಲ್ಲಿ ಹೋದನು. ಅಲ್ಲಿ ಅವನು ನಾಲ್ಕು ನಾಲ್ಕು ತಿಂಗಳುಗಳ ಮೂರು ನೇಮಿಗಳಿರುವ ಸಂವತ್ಸರ ಎಂಬ ಕಾಲಚಕ್ರವನ್ನು ಕಂಡನು. ಇದು ಜೀವಿಗಳಿಗೆ ಮರಣದ ಭಯವನ್ನು ಉಂಟುಮಾಡುವಂಥದು. ಅಲ್ಲಿ ತನಗೆ ಕಾರಣನಾದ ಪರಮಾತ್ಮನನ್ನು ಕಾಣದೆ ಅವನನ್ನು ಕಾಣಲು ತಪಸ್ಸನ್ನು ಕೈಕೊಂಡನು.

> **ತಸ್ಯಾಂ ಸ ಚಾಂಭೋರುಹ ಕರ್ಣಿಕಾಯಾಮವಸ್ಥಿತೋಽಲೋಕಮಪಶ್ಯಮಾನಃ ।**
> **ಪರಿಕ್ರಮನ್ವ್ಯೋಮ್ನಿ ವಿವೃತ್ತನೇತ್ರಃ ಚತ್ವಾರಿ ಲೇಭೇಽನುದಿಶಂ ಮುಖಾನಿ ।**
> **ಸ ಇತ್ಥಮುದ್ವೀಕ್ಷ್ಯ ತದಬ್ಜನಾಲ ನಾಲೀಭಿರಂತರ್ಜಲಮಾವಿವೇಶ**
> **ತಮಸ್ಯಪಾರೇ ವಿದುರ! ಆತ್ಮಸರ್ಗಂ ವಿಚಿನ್ವತೋಽಭೂತ್ ಸುಮಹಾನ್ ತ್ರಿನೇಮಿಃ**
> **ಯೋದೇಹಭಾಜಾಂ ಭಯಮೀರಯಾಣಃ ಪರಿಕ್ಷಿಣೋತ್ಯಾಯುರಜಸ್ಯಹೇತಿಃ ।**
> **ತತೋ ನಿವೃತ್ತ್ಯಾಪ್ರತಿಲಬ್ಧಕಾಮಃ ಸ್ವಧಿಷ್ಣ್ಯಮಾಧಾಯ ಪುನಃ ಸದೇವಃ ।**
> **ಶನೈಃ ಜಿತಶ್ವಾಸನಿವೃತ್ತಚಿತ್ತೋ ನ್ಯಷೀದದಾರೂಢ ಸಮಾಧಿಯೋಗಃ ।** (9-16,19,20,21)

ವಿರಿಂಚನಿಂದ ಪರಮಾತ್ಮನ ದಿವ್ಯರೂಪದರ್ಶನ, ಸ್ತೋತ್ರ

ಈ ತಪಸ್ಸಿನ ಫಲವಾಗಿ ವಿರಿಂಚನು ಪರಮಾತ್ಮನ ದಿವ್ಯರೂಪವನ್ನು ಕಾಣುವನು. ಈ ದಿವ್ಯರೂಪವನ್ನು ಭಾಗವತದಲ್ಲಿ ಹನ್ನೆರಡು ಶ್ಲೋಕಗಳಿಂದ ವರ್ಣಿಸಲಾಗಿದೆ. (9-22,33)

> **ಮೃಣಾಲಗೌರಾಯತ ಶೇಷಭೋಗ ಪರ್ಯಂಕ ಏಕಂ ಪುರುಷಂ ಶಯಾನಮ್ ।**
> **ಫಣಾಸಹಸ್ರಾಯುತಮೂರ್ಧರತ್ನದ್ಯುಭಿರ್ಹತಧ್ವಾಂತಯುಗಾಂತತೋಯೇ ।**
> **ಮುಖೇನ ಲೋಕಾರ್ತಿಹರಸ್ಮಿತೇನ ಪರಿಸ್ಫುರತ್ ಕುಂಡಲಮಂಡಿತೇನ ।**
> **ಶೋಣಾಯಿತೇನಾಧರಬಿಂಬಭಾಸಾ ಪ್ರತ್ಯರ್ಹಯಂತಂ ಸುನಸೇನ ಸುಭ್ರ್ವಾ ॥** (9-23,27)

ಕಮಲದ ದೇಟುಗಳಂತೆ ಕೋಮಲವಾದ ಶೇಷನ ಶರೀರವೆಂಬ ಮಂಚದ ಮೇಲೆ ಮಲಗಿದ ಸಾವಿರ ಹೆಡೆಗಳ ಶಿರೋರತ್ನಗಳ ಕಾಂತಿಯಿಂದ ಪ್ರಲಯಕಾಲದ ಕತ್ತಲೆಯನ್ನು ದೂರೀಕರಿಸುತ್ತಿದ್ದ, ಮುಖದ ಕಾಂತಿಯಿಂದ ಜನರ ದುಃಖವನ್ನೆಲ್ಲ ಪರಿಹರಿಸುತ್ತಿದ್ದ, ಹೊಳೆಯುವ ಕುಂಡಲಗಳನ್ನು ಧರಿಸಿದ್ದ, ಸುಂದರವಾದ ಮೂಗು ಹುಬ್ಬುಗಳು ಮತ್ತು ಕೆಂಪಾದ ತುಟಿಗಳಿಂದ ಭಕ್ತರನ್ನು ಸ್ವಾಗತಿಸುತ್ತಿರುವ ಪರಮಪುರುಷನನ್ನು ವಿರಿಂಚನು ಕಂಡನು. ಹೀಗೆ ಕಂಡ ಅವನನ್ನು ಅನೇಕರೀತಿಯಿಂದ ಸ್ತುತಿಸುವನು.

> **ಯದ್‌ವಾ ಇದಂ ಭುವನಮಂಗಲಮಂಗಲಂ ಯದ್**
> **ಧ್ಯಾನಾತ್ಮನೋ ದರ್ಶಿತಂ ತ ಉಪಾಸಕಾನಾಮ್ ।**
> **ತಸ್ಮೈ ನಮೋ ಭಗವತೇ ಅನುವಿಧೇಯ ತುಭ್ಯಮ್**
> **ಯೋಽನಾದೃತೋ ನಿರಯಭಾಗ್ಭಿಃ ಅಸತ್ ಪ್ರಸಂಗೈಃ ॥** (10-4)

ಯಾವದ್ ಭಯಂ ದ್ರವಿಣಗೇಹ ಸುಹೃನ್ನಿಮಿತ್ತಮ್
ಶೋಕಃ ಸ್ಪೃಹಾ ಪರಿಭವೋ ವಿಪುಲಶ್ಚಲೋಭಃ
ತಾವನ್ಮಮೇತ್ಯಸದವಗ್ರಹ ಆರ್ತಿಮಾಲಂ
ಯಾವನ್ನತೇಽಙ್ಘ್ರಿಮಭಯಂ ಪ್ರವೃಣೀತ ಲೋಕಃ । (10-6)

ತಿರ್ಯಙ್ ಮನುಷ್ಯವಿಬುಧಾದಿಷು ಜೀವಯೋನಿಷು
ಆತ್ಮೇಚ್ಛಯಾ ಆತ್ಮಕೃತ ಸೇತು ಪರೀಪ್ಸಯಾ ಯಃ ।
ರೇಮೇ ಅನಿರಸ್ತರತಿರಪ್ಯುಪಲಬ್ಧಕಾಷ್ಠಃ ।
ತಸ್ಮೈ ನಮೋ ಭಗವತೇ ಪುರುಷೋತ್ತಮಾಯ । (10-19)

ನಿನ್ನ ಉಪಾಸಕರಿಗೆ ನೀನು ತೋರಿಸುವ ಈ ರೂಪವು ಜಗತ್ತಿಗೇ ಮಂಗಲಕರವಾದುದು. ಇದಕ್ಕೆ ನಾನು ನಮಸ್ಕರಿಸುವೆನು. ಇದನ್ನು ಕಾಣದೆ ಅಸತ್ತಾದ ಮಾತುಕತೆಗಳಲ್ಲಿಯೇ ಕಾಲಕಳೆಯುವವರು ಖಂಡಿತವಾಗಿಯೂ ನರಕ-ಭಾಗಿಗಳಾಗುವರು.

ನಿನ್ನ ಪಾದಗಳಿಗೆ ಎರಗಿ ಅಭಯವನ್ನು ಬೇಡುವವರೆಗೆ ಧನ, ಮನೆ, ಮಿತ್ರರು, ದುಃಖ, ಆಸೆ, ಅವಮಾನ, ನಾನು ನನ್ನದು ಎಂಬ ಅಭಿಮಾನ ಇವುಗಳ ಭಯವು ತಪ್ಪಿದ್ದಲ್ಲ.

ಯಾರು ಭಗವಂತನ ಗುಣಗಳು ಅವತಾರಕಾರ್ಯಗಳು ಮತ್ತು ನಾಮ ಇವುಗಳನ್ನು ಪ್ರಾಣಾಂತಕಾಲದಲ್ಲಿ ಸ್ಮರಿಸುವರೋ ಅವರು ಅನೇಕ ಜನ್ಮಗಳ ಪಾಪಗಳನ್ನು ಕಳೆದುಕೊಂಡು ನಿನ್ನನ್ನು ಪಡೆಯುವರು.

ಹೀಗೆಂದು ತನ್ನ ಸ್ತೋತ್ರವನ್ನು ಮಾಡಿದ ವಿರಿಂಚನಿಗೆ ಭಗವಂತನು ನಾನು ಪ್ರೀತನಾಗಿದ್ದೇನೆ. ನೀನು ಇನ್ನೂ ಹೆಚ್ಚು ತಪಸ್ಸು ಮಾಡು. ಅಂದರೆ ನನ್ನ ಉದರದಲ್ಲಿರುವ ಲೋಕಗಳನ್ನೆಲ್ಲ ಕಾಣುವಿ. ನಂತರ ಪ್ರಜೆಗಳನ್ನು ಸೃಷ್ಟಿಮಾಡು ಎಂದು ಹೇಳಿ ಅಂತರ್ಧಾನ ಹೊಂದುವನು.

ವಿರಿಂಚನ ತಪಸ್ಸು, ನವವಿಧ ಸೃಷ್ಟಿ

ಪರಮಾತ್ಮನು ಅಂತರ್ಧಾನವನ್ನು ಹೊಂದಿದಮೇಲೆ ಅವನ ಆಜ್ಞೆಯಂತೆ ವಿರಿಂಚನು ದಿವ್ಯ ವರ್ಷಶತಕಾಲ ತಪಸ್ಸನ್ನು ಮಾಡುವನು. ಭಗವಂತನ ಪ್ರಬೋಧಕಾಲವು ವಿರಿಂಚನ ಅಧಿಷ್ಠಾನವಾದ ಕಮಲ ಮತ್ತು ಪ್ರಲಯಜಲಗಳು ಕಂಪಿತವಾದದ್ದರಿಂದ ಸೂಚಿತವಾಯಿತು. ಆಗ ವಿರಿಂಚನು ಆ ನೀರು ಮತ್ತು ವಾಯುಗಳನ್ನು ಕುಡಿದುಬಿಡುವನು. ಪ್ರಲಯಕಾಲದಲ್ಲಿ ಲೀನವಾದ ಲೋಕಗಳನ್ನೆಲ್ಲ ಕಮಲದಿಂದ ಸೃಷ್ಟಿಸುವುದಾಗಿ ಸಂಕಲ್ಪಿಸಿದನು. ಕಮಲವನ್ನು ಪ್ರವೇಶಿಸಿ ಅದನ್ನು ಪೃಥಿವೀ ಅಂತರಿಕ್ಷ, ಸ್ವರ್ಗ ಎಂದು ಮೂರು ಮತ್ತು ಹದಿನಾಲ್ಕು ಲೋಕಗಳನ್ನಾಗಿ ವಿಭಾಗಿಸಿದನು.

ವಿರಿಂಚೋಽಪಿ ತಥಾ ಚಕ್ರೇ ದಿವ್ಯಂ ವರ್ಷಶತಂ ತಪಃ । (11-4)

ತದ್ವಿಲೋಕ್ಯಾಬ್ಜ ಸಂಭೂತೋ ವಾಯುನಾ ಯದಧಿಷ್ಠಿತಮ್ ।
ಪದ್ಮಮಂಭಶ್ಚ ತತ್ಕಾಲಕೃತವೀರ್ಯೇಣ ಕಂಪಿತಮ್ ॥ (11-5)

ವಿವೃದ್ಧವಿಜ್ಞಾನಬಲಃ ನ್ಯಪಾದ್ ವಾಯುಂ ಸಹಾಂಭಸಾ
ತದ್ವಿಲೋಕ್ಯ ವಿಯದ್ವ್ಯಾಪಿ ಪುಷ್ಕರಂ ಯದಧಿಷ್ಠಿತಃ
ಅನೇನ ಲೋಕಾನ್ ಪ್ರಾಗ್ಲೀನಾನ್ ಕಲ್ಪಿತಾಸ್ಮೀತ್ಯಚಿಂತಯತ್ ।
ಪದ್ಮಲೋಕಂ ತದಾವಿಶ್ಯ ಭಗವಾನ್ ಕರ್ಮಚೋದಿತಃ
ಏಕಂ ವ್ಯಭಾಂಕ್ಷೀದುರುಧಾ ತ್ರಿಧಾ ಭಾವ್ಯದ್ವಿಸಪ್ತಧಾ । (11-4 ರಿಂದ 8)

ಮುಂದೆ ಮೈತ್ರೇಯನು ನವವಿಧ ಸೃಷ್ಟಿಗಳನ್ನು ವರ್ಣಿಸುವನು. ಪರಮಾತ್ಮನೇ ಬ್ರಹ್ಮ ವಿಷ್ಣು ಶಿವ ಎಂಬ ಮೂರು ರೂಪಗಳನ್ನು ತಾಳಿ ಸೃಷ್ಟಿ, ಸ್ಥಿತಿ, ಸಂಹಾರಕಾರ್ಯಗಳಲ್ಲಿ ತೊಡಗುವನು. ಸೃಷ್ಟಿಯು ಪ್ರಾಕೃತ ಮತ್ತು ವಿಕೃತ ಎಂದು ಎರಡು ವಿಧ. ಪ್ರಾಕೃತಸೃಷ್ಟಿಯು ಬ್ರಹ್ಮಾಂಡದ ಹೊರಗೆ ಆಗುವುದು. ಇದು ಆರು ವಿಧ :

1) ಮಹತ್ತತ್ವದ ಸೃಷ್ಟಿ (2) ಅಹಂಕಾರತತ್ವದ ಸೃಷ್ಟಿ (3) ತಾಮಸಾಹಂಕಾರದಿಂದ ಪಂಚಭೂತಗಳ ಮತ್ತು ಇವುಗಳ ತನ್ಮಾತ್ರಗಳಾದ ಶಬ್ದಸ್ಪರ್ಶಾದಿಗಳ ಸೃಷ್ಟಿ (4) ತೈಜಸಾಹಂಕಾರದಿಂದ ಇಂದ್ರಿಯಗಳ ಸೃಷ್ಟಿ (5) ಇಂದ್ರಿಯಗಳಿಗೆ ಪ್ರೇರಕರಾದ ವೈಕಾರಿಕ ದೇವತೆಗಳ ಸೃಷ್ಟಿ, ಮನಸ್ಸಿನ ಸೃಷ್ಟಿ (6) ತಮಸ್ಸಿನ ಅಂದರೆ ಅವಿದ್ಯೆಯ ಸೃಷ್ಟಿಯು. ಈ ಅವಿದ್ಯೆಯು ತಮಸ್, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂದು ಐದು ವಿಧವಾಗಿರುವುದು. ಇವು ಆರೂ ಪ್ರಾಕೃತ ಸೃಷ್ಟಿಗಳು.

ಮುಂದಿನ ಏಳು-ಎಂಟು ಒಂಬತ್ತನೆಯ ಸೃಷ್ಟಿಗಳು ವೈಕೃತ ಸೃಷ್ಟಿಗಳು. ಇವುಗಳೆಲ್ಲ ಏಳನೆಯದು ಸ್ಥಾವರ ವಸ್ತುಗಳ ಸೃಷ್ಟಿ. ಇದು ಪನಸಾದಿ ವನಸ್ಪತಿ, ವ್ರೀಹ್ಯಾದಿ ಔಷಧಿ, ಮಲ್ಲಿಗೆ ಮೊದಲಾದ ಬಳ್ಳಿಗಳು, ಮಾವು ಮೊದಲಾದ ತೊಗಟೆಯೇ ಪ್ರಧಾನವಾದವು, ಗುಲ್ಮ ಗಿಡಮರಗಳು ಎಂದು ಆರು ವಿಧವಾಗಿದೆ.

ಎಂಟನೆಯದು ಪಶುಪಕ್ಷಿಗಳ ಸೃಷ್ಟಿ. ಇವು ಇಪ್ಪತ್ತೆಂಟು ವಿಧ. ಇವುಗಳಲ್ಲಿ ಗೋವು, ಆಡು, ಎಮ್ಮೆ, ಕೃಷ್ಣಮೃಗ, ಹಂದಿ, ಒಂಟೆ ಇವು ಎರಡು ಖುರಗಳು ಇರುವಂಥವು. ಕತ್ತೆ ಕುದುರೆ ಶರಭ ಚಮರೀಮೃಗ ಇವೆಲ್ಲ ಒಂದು ಖುರ ಇರುವವು. ನಾಯಿ, ನರಿ, ತೋಳ ಹುಲಿ ಇತ್ಯಾದಿಗಳು ಐದು ಉಗುರು ಇರುವವು. ನವಿಲು, ಹಂಸ, ಕಾಗೆ, ಹದ್ದು ಇತ್ಯಾದಿಗಳು ಪಕ್ಷಿಗಳು. ಒಂಬತ್ತನೆಯ ಗುಂಪಿನಲ್ಲಿ ಮನುಷ್ಯರು ಅಸುರರೂ ಬರುವರು. ವೈಕಾರಿಕಾಹಂಕಾರದಿಂದ ಸೃಷ್ಟರಾದ ದೇವತೆಗಳು ಮತ್ತೆ ಬ್ರಹ್ಮಾಂಡದ ಒಳಗೆ ಸೃಷ್ಟರಾಗುವುದು ಕೌಮಾರ ಸರ್ಗ. ಇದು ಪ್ರಾಕೃತ ಮತ್ತು ವೈಕೃತ ಉಭಯಾತ್ಮಕವಾಗಿದೆ.

ಸರ್ಗೋ ನವವಿಧಃ ತಸ್ಯ ಪ್ರಾಕೃತೋ ವೈಕೃತಶ್ಚ ಯಃ ।
ಆದ್ಯಸ್ತು ಮಹತಃ ಸರ್ಗೋ ಗುಣವೈಷಮ್ಯಮಾತ್ಮನಃ ।
ದ್ವಿತೀಯಸ್ತು ಅಹಮಃ ತತ್ರದ್ರವ್ಯ ಜ್ಞಾನಕ್ರಿಯಾದಯಃ ।
ಭೂತಸರ್ಗಃ ತೃತೀಯಸ್ತು ತನ್ಮಾತ್ರದ್ರವ್ಯಶಕ್ತಿಮಾನ್ ॥

ಚತುರ್ಥಃ ಐಂದ್ರಿಯಃ ಸರ್ಗಃ ಯಸ್ತು ಜ್ಞಾನಕ್ರಿಯಾತ್ಮಕಃ ।
ವೈಕಾರಿಕೋ ದೇವಸರ್ಗಃ ಪಂಚಮೋ ಯನ್ಮಯಂ ಮನಃ ॥

ಷಷ್ಠಸ್ತು ತಮಸಃ ಸರ್ಗೋ ಯಸ್ತ್ವಬುದ್ಧಿಕೃತಃ ಪ್ರಭೋ
ಷಡಿಮೇ, ಪ್ರಾಕೃತಾಃ ಸರ್ಗಾಃ ವೈಕೃತಾನಪಿ ಮೇಶ್ರುಣ । (11-13-17)

ಸಪ್ತಮೋಮುಖ್ಯ ಸರ್ಗಸ್ತು ಷಡ್ವಿಧಃ ತಸ್ಥುಷಾಂ ಚ ಯಃ ।

ವನಸ್ಪತ್ಯೋಷಧಿಲತಾ ತ್ವಕ್‌ಸಾರಾ ವೀರುಧೋದ್ರುಮಾಃ
ಉತ್ಸ್ರೋತಸಃ ತಮಃ ಪ್ರಾಯಾಃ ಅಂತಃಸ್ಪರ್ಶಾಃ ವಿಶೋಷಿಣಃ
ತಿರಶ್ಚಾಮಷ್ಟಮಃ ಸರ್ಗಃ ಸೋಷ್ಟಾವಿಂಶದ್ವಿಧೋಮತಃ । (11-18, 19)

ಅರ್ವಾಕ್ ಸ್ರೋತಸ್ತು ನವಮಃ ಕ್ಷತ್ತರೇಕ ವಿಧೋನೃಣಾಮ್ ।

ವೈಕೃತಾಃ ತ್ರಯ ಏವೈತೇ ದೇವಸರ್ಗಶ್ಚ ಸತ್ತಮ
ವೈಕಾರಿಕಸ್ತ್ವಯಃ ಪ್ರೋಕ್ತಃ ಕೌಮಾರಸ್ತೂಭಯಾತ್ಮಕಃ । (11-25, 26)

ದೇವಸೃಷ್ಟಿಯು ಎಂಟುವಿಧ. ವಿಬುಧರು ಪಿತರು ಅಸುರರು ಗಂಧರ್ವರು ಅಪ್ಸರರು ಸಿದ್ಧರು ಯಕ್ಷರು ರಾಕ್ಷಸರು ಚಾರಣರು ಭೂತಪ್ರೇತಾದಿಗಳು ವಿದ್ಯಾಧರರು ಕಿನ್ನರರು. ಇಲ್ಲಿ ಎಂಟು ವಿಧ ಎಂದು ಸಂಖ್ಯೆಯನ್ನು ಹೇಳಿದ್ದು

ಉಪಲಕ್ಷಣವು. ಹಿಂದೆ ಹೇಳಿದ ಒಂಬತ್ತು ಸೃಷ್ಟಿಗಳಿಗೆ ಈ ದೇವಸೃಷ್ಟಿಯನ್ನು ಸೇರಿಸಿದರೆ ಸೃಷ್ಟಿಯು ದಶವಿಧ-ವಾಗುವುದು.

ದೇವಸರ್ಗಶ್ಚಾಷ್ಟವಿಧೋ ವಿಬುಧಾಃ ಪಿತರೋಽಸುರಾಃ ।
ಗಂಧರ್ವಾಪ್ಸರಸಃ ಸಿದ್ಧಾಃ ಯಕ್ಷರಕ್ಷಾಂಸಿ ಚಾರಣಾಃ ॥

ಭೂತಪ್ರೇತಪಿಶಾಚಾಶ್ಚ ವಿದ್ಯಾಧ್ರಾ ಕಿನ್ನರಾದಯಃ ।
ದಶೈತೇ ವಿದುರಾಖ್ಯಾತಾಃ ಸರ್ಗಾಸ್ತೇ ವಿಶ್ವಸೃಕ್‌ಕೃತಾಃ ॥ (11-27,28)

ಕಾಲದ ವಿವರಗಳು

ಭಗವಂತನು ಕಾಲತಃ ಅನಂತನು, ದೇಶತಃ ಅನಂತನು ಎಂಬುದನ್ನು ತಿಳಿಯಬೇಕಾದರೆ ಕಾಲ ಮತ್ತು ದ್ರವ್ಯಗಳ ಪರಿಮಾಣವನ್ನು ತಿಳಿದುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಕಾಲದ ಪರಿಮಾಣವನ್ನು ಈಗ ವಿವರಿಸುವರು. ದೇವಲೋಕದಲ್ಲಿರುವ ಮನುಷ್ಯರು ಸೂಕ್ಷ್ಮವಾಗಿ ನೋಡಿದಾಗ ಕಾಣುವ ದ್ರವ್ಯದ ಅಂತಿಮ ಆಕಾರವು ಪರಮಾಣು ಪ್ರಮಾಣವು. ಇದು ಅವಯವಗಳು ಉಳ್ಳದ್ದೇ ಆಗಿರುವುದು. ಆದರೆ ಈ ಅವಯವಗಳು ಅವರಿಗೆ ಕಾಣುವುದಿಲ್ಲ. ಹೀಗಿರುವುದರಿಂದಲೇ ಕಣಾದಾದಿಗಳು ಪರಮಾಣುವು ನಿರವಯವ ಎಂದು ಭ್ರಾಂತಿ ಪಟ್ಟಿರುವರು.

ಚರಮಸ್ತು ವಿಶೇಷಾಣಾಮನೇಕಾವಯವಸಂಯುತಃ ।
ಪರಮಾಣುಃ ಸ ಚ ವಿಜ್ಞೇಯೋ ನೃಣಾಮೈಕ್ಯಭ್ರಮೋ ಯತಃ ॥

ಶ್ರೀಹರಿಯು ಪರಮಾಣುರೂಪದಿಂದ ವ್ಯಾಪ್ತನಾಗಿರುವ ಕಾಲಕ್ಕೆ ಪರಮಾಣುಕಾಲ ಎನ್ನುವರು. ನಿರಂತರವಾದ ಪರಮಾತ್ಮ ಭೋಗಕಾಲವು ಪರಮಮಹತ್ಕಾಲವು.

ಸಕಾಲಃ ಪರಮಾಣುರ್ವೈ ಯೋ ಭುಂಕ್ತೇ ಪರಮಾಣುತಾಮ್ ।
ಸತೋ ಅವಿಶೇಷಭುಕ್ ಯಸ್ತು ಸಕಾಲಃ ಪರಮೋ ಮಹಾನ್ ॥ (12-4)

ಈ ಪರಮಾಣುಕಾಲ ಮತ್ತು ಮಹಾನ್‌ಕಾಲ ಈ ಕಾಲಗಳ ಮಧ್ಯದ ಕಾಲದ ಎಣಿಕೆ ಈ ಕೆಳಗಿನಂತಿದೆ.

2 ಪರಮಾಣುಗಳಿಂದ 1 ಅಣು, (ದ್ವ್ಯಣುಕ) 3 ಅಣುಗಳಿಂದ 1 ತ್ರಸರೇಣು, 3 ತ್ರಸರೇಣು 1 ತ್ರುಟಿ, 3 ತ್ರುಟ 1 ವೇಧ, 3 ವೇಧ 1 ಲವ, 3 ಲವ 1 ನಿಮೇಷ.

3 ನಿವೇಷ 1 ಕ್ಷಣ, 5 ಕ್ಷಣ 1 ಕಾಷ್ಠಾ. 15 ಕಾಷ್ಠಾ 1 ಲಘು 15 ಲಘು 1 ನಾಡೀ. 2 ನಾಡಿ 1 ಮುಹೂರ್ತ. 3 ಮುಹೂರ್ತ 1 ಯಾಮ. 8 ಯಾಮ 1 ದಿವಸ. (ಒಂದು ಹಗಲುರಾತ್ರಿ) 15 ದಿನ 1 ಪಕ್ಷ 2 ಪಕ್ಷ 1 ಮಾಸ. 2 ಮಾಸ 1 ಋತು. 6 ಮಾಸಗಳು 1 ಅಯನ 2 ಅಯನಗಳು 1 ವರ್ಷ 5 ಸಾವಿರ ವರ್ಷ ಒಂದು ಮಹಾಯುಗ (ಕೃತ, ತ್ರೇತಾ, ದ್ವಾಪರ, ಕಲಿಗಳ ಒಟ್ಟು ಕಾಲಮಾನ - ಕೃತ ನಾಲ್ಕು ಸಾವಿರ, ತ್ರೇತಾ ಮೂರುಸಾವಿರ, ದ್ವಾಪರ ಎರಡು ಸಾವಿರ, ಕಲಿ ಒಂದು ಸಾವಿರ ಸಂಧಿಕಾಲ ಎರಡು ಸಾವಿರ.) 71 ಮಹಾಯುಗಗಳು ಒಂದು ಮನ್ವಂತರ, 14 ಮನ್ವಂತರಗಳು ಬ್ರಹ್ಮದೇವರ 1 ಹಗಲು, ಅಷ್ಟೇಕಾಲ ರಾತ್ರಿ. 1000 ಮಹಾಯುಗಗಳು (ಹಗಲು ರಾತ್ರಿ ಕೂಡಿ) 1 ದಿನ ಕಲ್ಪ.

ಅಣುಃದ್ವೌ ಪರಮಾಣುಃ ಸ್ಯಾತ್ ತ್ರಸರೇಣುಃ ತ್ರಯಃ ಸ್ಮೃತಃ ।
ತ್ರಿಸರೇಣುತ್ರಯಃ ಭುಂಕ್ತೇ ಯಃ ಕಾಲಃ ಸಃ ತ್ರುಟಿಃ ಸ್ಮೃತಾ ॥

ತತ್ತ್ರಿಭಾಗಸ್ತು ವೇಧಃ ಸ್ಯಾತ್ ತೈಃ ತ್ರಿಭಿಸ್ತು ಲವಃ ಸ್ಮೃತಃ ।
ನಿಮೇಷಃ ತ್ರಿಲವೋಜ್ಞೇಯಃ ಆಮ್ನಾತಾಃ ತೇ ತ್ರಯಃ ಕ್ಷಣಃ ॥

ಕ್ಷಣಾನ್ ಪಂಚ ವಿದುಃ ಕಾಷ್ಠಾಂ ಲಘು ತಾ ದಶ ಪಂಚ ಚ ।
ಲಘೂನಿ ವೈಸಮಾಮ್ನಾತಾದಶ ಪಂಚ ಚ ನಾಡಿಕಾ ॥

ತೇದ್ವೇ ಮುಹೂರ್ತಂ ಪ್ರಹರಃ ಷಡ್‌ಯಾಮಃ ಸಪ್ತವಾ ನೃಣಾಮ್ ।
ಯಾಮಾಃ ಚತ್ವಾರಃ ಚತ್ವಾರಃ ಮರ್ತ್ಯಾನಾಮಹನೀಉಭೇ ।
ಪಕ್ಷಃ ಪಂಚದಶಾಹಾನಿ ಶುಕ್ಲಃ ಕೃಷ್ಣಶ್ಚ ಮಾನದ ॥

ತಯೋಃ ಸಮುಚ್ಚಯೀ ಮಾಸಃ ಪಿತೃಣಾಂ ತದಹರ್ನಿಶಮ್ ।
ದ್ವೌತೌಋತುಃ ಷಡಯನಂ ದಕ್ಷಿಣಂಚೋತ್ತರಂ ದಿವಿ ॥

ಅಯನೇ ಅಹನೀ ಪ್ರಾಹುಃ ವತ್ಸರೋ ದ್ವಾದಶಃ ಸ್ಮೃತಃ ।
ಸಂವತ್ಸರಶತಂ ನೃಣಾಂ ಪರಮಾಯುರ್ನಿರೂಪಿತಮ್ ॥

ಆರು ಪಲ ಪರಿಮಾಣವಿದ್ದ ಪಾತ್ರೆಯಲ್ಲಿ ನಾಲ್ಕು ಅಂಗುಲ ಅಳತೆಯ ನಾಲ್ಕು ಬಂಗಾರದ ಕಾಳುಗಳನ್ನು ನಾಲ್ಕು ರಂಧ್ರಗಳಲ್ಲಿಟ್ಟು ನೀರು ತುಂಬಿದರೆ ಅದು ಕೆಳಗಿನ ಪಾತ್ರೆಗೆ ಹರಿದು ಹೋಗುವ ಕಾಲಕ್ಕೆ ನಾಡೀ ಎನ್ನುವರು.

ದ್ವಾದಶಾರ್ಧಪಲೋನ್ಮಾನಂ ಚತುರ್ಭಿಃ ಚತುರಂಗುಲೈಃ ।
ಸ್ವರ್ಣಮಾಷೈಃ ಕೃತಚ್ಛಿದ್ರಂ ಯಾವತ್ ಪ್ರಸ್ಥಜಲಂ ಪಿಬೇತ್ ॥

ಸಂವತ್ಸರವೂ ಐದು ವಿಧವಾಗಿದೆ. ಸೂರ್ಯನು ಹನ್ನೆರಡು ರಾಶಿಗಳನ್ನು ಸುತ್ತುವ ಕಾಲ ಸಂವತ್ಸರ, ಗುರುವು ಒಂದು ರಾಶಿಯಿಂದ ಇನ್ನೊಂದು ರಾಶಿ ಸೇರುವ ಕಾಲ ಪರಿವತ್ಸರ, ಇಪ್ಪತ್ತೇಳು ನಕ್ಷತ್ರಗಳು ಹನ್ನೆರಡು ಸಲ ತಿರುಗಿದರೆ ಇಡಾವತ್ಸರ, ಚಂದ್ರನು ತಿರುಗುತ್ತಾ ಹನ್ನೆರಡು ಹುಣ್ಣಿಮೆಗಳಾದರೆ ಅನುವತ್ಸರ, ಮೂನ್ನೂರಾ ಅರವತ್ತು ದಿನಗಳು ವತ್ಸರ.

ಸಂವತ್ಸರಃ ಪರಿವತ್ಸರಃ ಇಡಾವತ್ಸರ ಏವ ಚ ।
ಅನುವತ್ಸರೋ ವತ್ಸರಶ್ಚ ವಿದುರೈವಂ ಪ್ರಭಾಷ್ಯತೇ ॥

ಹೀಗೆ ಪರಮಾತ್ಮನ ಕಾಲಮಹಿಮೆಯನ್ನು ವರ್ಣಿಸಿ ಮೈತ್ರೇಯನು ಚತುರ್ಮುಖ ಬ್ರಹ್ಮನು ಮಾಡಿದ ಸೃಷ್ಟಿಯನ್ನು ವರ್ಣಿಸುವರು.

ಇತಿ ತೇ ವರ್ಣಿತಃ ಕ್ಷತ್ತಃ ಕಾಲಾಖ್ಯಃ ಪರಮಾತ್ಮನಃ ।
ಮಹಿಮಾ ವೇದಗರ್ಭೋಽಥಯದಸ್ರಾಕ್ಷೀತ್ ನಿಬೋಧಮೇ ॥ (13-1)

ಅವಿದ್ಯಾ ಸೃಷ್ಟಿ, ಸನಕಾದಿ ಸೃಷ್ಟಿ, ರುದ್ರ ಸೃಷ್ಟಿ

ಚತುರ್ಮುಖ ಬ್ರಹ್ಮನು ಮೊದಲು ತಾಮಿಸ್ರ ಅಂಧತಾಮಿಸ್ರ, ಮಹಾಮೋಹ, ಮೋಹ ಮತ್ತು ತಮಸ್ ಎಂಬ ಐದು ಅಜ್ಞಾನವೃತ್ತಿಗಳನ್ನು ಸೃಷ್ಟಿಸಿದನು. ಇವೆಲ್ಲ ಪಾಪಪ್ರಚೋದಕವಾದ್ದರಿಂದ ಬ್ರಹ್ಮನಿಗೆ ಅಸಮಾಧಾನವೇ ಆಯಿತು. ಅವನು ಧ್ಯಾನಮಾಡಿ ಪವಿತ್ರನಾಗಿ ಸನಕ ಸನಂದನ ಸನಾತನ ಮತ್ತು ಸನತ್ಕುಮಾರರೆಂಬ ಋಷಿಕುಮಾರರನ್ನು ಸೃಷ್ಟಿಸಿದನು.

ಸಸರ್ಜಾಗ್ರೇಽಥ ತಾಮಿಸ್ರಮಂಧತಾಮಿಸ್ರಮಾದಿಕೃತ್ ।
ಮಹಾಮೋಹಂ ಚ ಮೋ ಹಂಚ ತಮಶ್ಚಾಜ್ಞಾನವೃತ್ತಯಃ ।
ದೃಷ್ಟ್ವಾ ಪಾಪೀಯಸೀಂ ಸೃಷ್ಟಿಂ ನಾತ್ಮಾನಂ ಬಹುಮನ್ಯತ ।
ಭಗವದ್ಧ್ಯಾನಪೂತೇನ ಮನಸಾನ್ಯಾನ್ ತತೋಽಸೃಜತ್ ।
ಸನಕಂಚ ಸನಂದಂಚ ಸನಾತನಮಥಾತ್ಮಭೂಃ ।
ಸನತ್ಕುಮಾರಂ ಚ ಮುನಿಂ ನಿಷ್ಕ್ರಿಯಾನೂರ್ಧ್ವರೇತಸಃ ॥ (13-2, 3, 4)

ಈ ನಾಲ್ಕು ಮಕ್ಕಳಿಗೂ ಸೃಷ್ಟಿಯನ್ನು ಮುಂದುವರೆಯಿಸಬೇಕು ಎಂದು ಹೇಳಿದನು. ಪರಮವೈರಾಗ್ಯಶಾಲಿಗಳಾದ ಅವರು ಸಂಸಾರಿಗಳಾಗಲು ಒಪ್ಪಿಕೊಳ್ಳಲಿಲ್ಲ. ಆಗ ಚತುರ್ಮುಖಬ್ರಹ್ಮನಿಗೆ ಕೋಪಬಂದಿತು. ಅದನ್ನು ತಡೆದುಕೊಳ್ಳಲು

ಹುಬ್ಬುಗಂಟಿಕ್ಕಿದನು. ಹೀಗೆ ಗಂಟಿಕ್ಕಿದ ಹುಬ್ಬುಗಳ ಮಧ್ಯದಿಂದ ರುದ್ರದೇವರು ಹುಟ್ಟಿದರು. ಈ ರುದ್ರದೇವರು ತಮಗೆ ಇರಲಿಕ್ಕೆ ಸ್ಥಳವನ್ನು ಬೇಡಿದರು. ಆಗ ಚತುರ್ಮುಖಬ್ರಹ್ಮನು ಅವನಿಗೆ ಹೃದಯ, ಇಂದ್ರಿಯಗಳು, ಪ್ರಾಣ, ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ, ಸೂರ್ಯ, ಚಂದ್ರ, ತಪಸ್ಸು ಎಂಬ ಹನ್ನೊಂದು ಸ್ಥಾನಗಳನ್ನು ಕೊಟ್ಟನು. ಹನ್ನೊಂದು ಹೆಸರುಗಳನ್ನು ಕೊಟ್ಟನು. ರುದ್ರಾಣಿಯರು ಎಂದು ಪ್ರಸಿದ್ಧರಾದ ಹನ್ನೊಂದು ಜನ ಸ್ತ್ರೀಯರನ್ನೂ ಕೊಟ್ಟನು. ಈ ಎಲ್ಲ ಪರಿವಾರ ಪಡೆದ ರುದ್ರನು ಸೃಷ್ಟಿಸಿದ ಪ್ರಜೆಗಳು ಜಗತ್ತನ್ನೆಲ್ಲ ಹಿಂಸಿಸುವಂಥವರಾದರು. ಆಗ ಬ್ರಹ್ಮನು ನೀನು ಸೃಷ್ಟಿ ಮಾಡುವುದು ಸಾಕು. ತಪಸ್ಸು ಮಾಡಲು ತೆರಳು ಎಂದು ಆಜ್ಞಾಪಿಸುವರು. ಅವನು ಅರಣ್ಯಕ್ಕೆ ಹೋಗಿ ತಪಸ್ಸನ್ನು ಕೈಕೊಂಡನು.

ಮರೀಚಿ ಮೊದಲಾದ ಋಷಿಗಳ ಸೃಷ್ಟಿ, ವೇದ, ಉಪವೇದಾದಿಗಳ ಸೃಷ್ಟಿ

ಬ್ರಹ್ಮನು ಮತ್ತೆ ಧ್ಯಾನಮಗ್ನನಾಗಿ ನಾರದನೂ ಸೇರಿದಂತೆ ಹತ್ತುಜನ ಮಕ್ಕಳನ್ನು ಪಡೆದನು.

ಮರೀಚಿಃ ಅತ್ರ್ಯಂಗೀರಸೌ ಪುಲಸ್ತ್ಯಃ ಪುಲಹಃ ಕ್ರತುಂ
ಭೃಗುಃ ವಸಿಷ್ಠೋ ದಕ್ಷಶ್ಚ ದಶಮಂ ತತ್ರನಾರದಃ ॥ (13-22)

ಬ್ರಹ್ಮನ ಅಂಗಗಳಿಂದ ಧರ್ಮ, ಅಧರ್ಮ, ಮೃತ್ಯು, ಕಾಮ, ಕ್ರೋಧ, ಲೋಭ, ವಾಕ್ ನದಿಗಳು ನಿಋತಿ ಜನಿಸಿದರು. ಬ್ರಹ್ಮನ ನೆರಳಿನಿಂದ ಕರ್ದಮನು ಜನಿಸಿದನು. ಹೀಗೆ ಬ್ರಹ್ಮನ ಮನಸ್ಸು ಮತ್ತು ದೇಹದಿಂದ ಇವರೆಲ್ಲ ಜನಿಸಿದರು.

ಹೀಗೆ ಜನಿಸಿದವರಲ್ಲಿ ತನ್ನ ಮಗಳಾದ ವಾಗ್‌ದೇವಿಯನ್ನೇ ಬ್ರಹ್ಮನು ಕಾಮಿಸಿದನು. ಇದು ಸರಿಯಲ್ಲ ಎಂದು ಮರೀಚಿಯೇ ಮೊದಲಾದ ಋಷಿಗಳು ಹೇಳಿದ್ದರಿಂದ ತನ್ನ ಕಾಮವನ್ನು ಬಿಟ್ಟುಬಿಟ್ಟನು.

ಮುಂದೆ ಬ್ರಹ್ಮನು ತನ್ನ ನಾಲ್ಕು ಮುಖಗಳಿಂದ (1) ನಾಲ್ಕು ವೇದಗಳು (2) ನಾಲ್ಕು ಋತ್ವಿಜರು (3) ಆಯುರ್ವೇದ, ಧನುರ್ವೇದ, ಗಾಂಧರ್ವ, ಶಿಲ್ಪಶಾಸ್ತ್ರವೆಂಬ ನಾಲ್ಕು ಉಪವೇದಗಳು (4) ವಿದ್ಯೆ, ದಾನ, ಸತ್ಯ, ತಪಸ್ಸು ಎಂಬ ನಾಲ್ಕು ಧರ್ಮದ ಪಾದಗಳು (5) ನಾಲ್ಕು ಆಶ್ರಮದವರ ಧರ್ಮಗಳು (7) ನಾಲ್ಕೂ ವರ್ಣದವರ ಧರ್ಮಗಳು (8) ಜಲ, ಭೂಃ, ಭುವಃ, ಸುವಃ ಎಂಬ ನಾಲ್ಕು ವ್ಯಾಹೃತಿ ಮಂತ್ರಗಳು ಜನಿಸಿದವು.

ಸ್ವಾಯಂಭುವ ಮನುವಿನ ಸೃಷ್ಟಿ

ಇವುಗಳನ್ನೆಲ್ಲ ಸೃಷ್ಟಿಸಿದ ಮೇಲೆ ಬ್ರಹ್ಮನು ತಾನು ಮತ್ತೊಂದು ರೂಪವನ್ನು ತಾಳಿ ಸೃಷ್ಟಿಯನ್ನು ಮಾಡಬೇಕೆಂದು ಸಂಕಲ್ಪಿಸಿ ಸ್ತ್ರೀಪುರುಷ ರೂಪವನ್ನು ತಾಳಿ ಅವುಗಳನ್ನು ಪ್ರತ್ಯೇಕಿಸಿ ಸ್ವಾಯಂಭುವ ಮನು ಮತ್ತು ಶತರೂಪಾ ಎಂಬ ಸ್ತ್ರೀಯನ್ನು ಸೃಷ್ಟಿಸಿದನು. ಈ ದಂಪತಿಗಳಿಗೆ ಪ್ರಿಯವ್ರತ, ಉತ್ತಾನಪಾದರೆಂಬ ಇಬ್ಬರು ಗಂಡುಮಕ್ಕಳೂ ಆಕೂತಿ ದೇವಹೂತಿ ಮತ್ತು ಪ್ರಸೂತಿ ಎಂಬ ಮೂವರು ಕನ್ಯೆಯರೂ ಜನಿಸಿದರು. ಆಕೂತಿಯನ್ನು ರುಚಿಕನಿಗೂ ದೇವಹೂತಿಯನ್ನು ಕರ್ದಮನಿಗೂ ಪ್ರಸೂತಿಯನ್ನು ದಕ್ಷನಿಗೂ ಕೊಟ್ಟು ವಿವಾಹ ಮಾಡಿದನು. ಇವರುಗಳಿಂದ ಹುಟ್ಟಿದ ಪುತ್ರ ಪುತ್ರಿಯರಿಂದಲೇ ಮಾನವ ಸಂತಾನವೆಲ್ಲ ಬೆಳೆಯಿತು.

ಹೀಗೆ ಬ್ರಹ್ಮನಿಂದ ಜನಿಸಿದ ಸ್ವಾಯಂಭುವ ಮನುವು ತನಗೆ ಇರಲಿಕ್ಕೆ ಒಂದು ಸ್ಥಳವನ್ನು ಒದಗಿಸಬೇಕೆಂದು ತಂದೆಯನ್ನು ಕೇಳಿಕೊಳ್ಳುವನು. ಭೂಮಿಯು ಆಗ ಸಾಗರದಲ್ಲಿ ಮುಳುಗಿ ಹೋಗಿತ್ತು. ಇವನಿಗೆ ಸ್ಥಳವನ್ನು ಹೇಗೆ ಒದಗಿಸುವುದು ಎಂಬ ಬ್ರಹ್ಮನು ಯೋಚಿಸುತ್ತಿರುವಾಗ ಅವನ ಮೂಗಿನಿಂದ ಒಂದು ವರಾಹವು ಹೊರಗೆ ಬಂದಿತು. ಅದು ದೊಡ್ಡದಾಗಿ ಸಮುದ್ರದಲ್ಲಿ ಮುಳುಗಿತು. ಇದು ವರಾಹರೂಪೀ ಪರಮಾತ್ಮನೇ ಎಂದು ತಿಳಿದ ಬ್ರಹ್ಮನು ಭಕ್ತಿಯಿಂದ ಆ ಪರಮಾತ್ಮನ ಸ್ತೋತ್ರವನ್ನು ಮಾಡಿದನು. ವರಾಹರೂಪೀ ಪರಮಾತ್ಮನು ಸಮುದ್ರದಲ್ಲಿ ಧುಮುಕಿ ಭೂಮಿಯನ್ನು ಮೇಲಕ್ಕೆತ್ತುವಾಗ ಹಿರಣ್ಯಾಕ್ಷನೆಂಬ ದೈತ್ಯನು ಅಡ್ಡಬಂದನು. ಆಗ ವರಾಹರೂಪೀ ಪರಮಾತ್ಮನು ಅವನ ಸಂಹಾರವನ್ನು ಮಾಡಿದನು.

ಯದಾ ಸ್ವಭಾರ್ಯಯಾ ಸಾಕಂ ಜಾತಃ ಸ್ವಾಯಂಭುವೋ ಮನುಃ ।
ಪ್ರಾಂಜಲಿಃ ಪ್ರಣತಶ್ಚೇದಂ ವೇದಗರ್ಭಮಭಾಷತ ॥

ಆದೇಶೇಹಂ ಭಗವತೋ ವರ್ತಯಾಮ್ಯರಿಸೂದನ ।
ಸ್ಥಾನಂ ತ್ವಿಹಾನುಜಾನೀಹಿ ಪ್ರಜಾನಾಂ ಮಮಚ ಪ್ರಭೋ ॥

ಇತ್ಯಭಿಧ್ಯಾಯತೋ ನಾಸಾವಿವರಾತ್ ಸಹಸಾನಘ
ವರಾಹತೋಕೋ ನಿರಗಾದಂಗುಷ್ಠ ಪರಿಮಾಣತಃ ॥

ಸ್ವದಂಷ್ಟ್ರಯೋದ್ಧೃತ್ಯ ಮಹೀಂ ವಿಲಗ್ನಾಂ ಸ ಉತ್ಥಿತಃ ಸಂರುರುಹೇ ರಸಾಯಾಃ ।
ಜಘಾನ ರುಂಧಾನಮಸಹ್ಯವಿಕ್ರಮಃ ಸಲೀಲಯೈನಂ ಮೃಗರಾಡಿವಾಂಭಸಿ ॥ (14-6, 14, 20, 33)

ಈ ವೃತ್ತಾಂತವನ್ನು ಕೇಳಿ ವಿದುರನು ಈ ಹಿರಣ್ಯಾಕ್ಷನು ಯಾರು ಅವನು ಭಗವಂತನ ದ್ವೇಷ ಮಾಡಲು ಕಾರಣವೇನು ಎಂದು ಮೈತ್ರೇಯನನ್ನು ಕೇಳುವನು. ಆಗ ಮೈತ್ರೇಯನು ಹಿರಣ್ಯಾಕ್ಷನ ಜನ್ಮದ ಕಥೆಯನ್ನು ಹೇಳುವನು.

ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳ ಜನ್ಮವೃತ್ತಾಂತ

ದಕ್ಷಪ್ರಜಾಪತಿಗೆ ಹದಿಮೂರು ಜನ ಹೆಣ್ಣುಮಕ್ಕಳು. ಅವರೆಲ್ಲರನ್ನೂ ಅವನು ಕಶ್ಯಪನಿಗೆ ಮದುವೆ ಮಾಡಿ-ಕೊಟ್ಟನು. ಇವರಲ್ಲಿ ದಿತಿ ಎಂಬುವಳ ಮಕ್ಕಳಾಗಿ ದೈತ್ಯರೂ ಅದಿತಿಯ ಮಕ್ಕಳಾಗಿ ದೇವತೆಗಳೂ ಜನಿಸಿದರು. ದಿತಿಯ ಹಿರಿಯಮಗ ಹಿರಣ್ಯಾಕ್ಷನು ದೈತ್ಯನಾಗಲು ಒಂದು ಹಿನ್ನೆಲೆಯಿದೆ. ಒಂದು ದಿನ ಸಾಯಂಕಾಲ ಕಶ್ಯಪರು ತಮ್ಮ ಸಂಧ್ಯಾಕಾಲದ ಜಪಾನುಷ್ಠಾನದಲ್ಲಿ ತೊಡಗಿದಾಗ ದಿತಿಯು ಕಾಮಾತುರಳಾಗಿ ಅವರನ್ನು ಕರೆಯುವಳು. ಈ ಕಾಲದಲ್ಲಿ ಸಂಭೋಗ ಸರಿಯಲ್ಲ ಎಂದು ಅವರು ಎಷ್ಟು ಹೇಳಿದರೂ ಕೇಳದೆ ಬಲಾತ್ಕಾರದಿಂದ ಸಂಭೋಗ ಪಡೆದದ್ದರಿಂದ ಅವಳ ಮಕ್ಕಳಾದ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ದೈತ್ಯಸ್ವಭಾವದವರಾದರು. ಅವಳು ಪಶ್ಚಾತ್ತಾಪ ಪಟ್ಟು ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಕೇಳಿಕೊಂಡಾಗ ಕಶ್ಯಪರು ನಿನ್ನ ಮೊಮ್ಮಗ ಪ್ರಲ್ಹಾದನು ಭಗವದ್ಭಕ್ತನಾಗುವನು ಎಂದು ವರ ಕೊಡುವರು.

ದಿತಿಃ ದಾಕ್ಷಾಯಣೀ ಕ್ಷತ್ತಃ ಮಾರೀಚಂ ಕಶ್ಯಪಂ ಪತಿಮ್ ।
ಅಪತ್ಯಕಾಮಾ ಚಕಮೇ ಸಂಧ್ಯಾಯಾಂ ಹೃಚ್ಛಯಾರ್ದಿತಾ ॥

ಭವಿಷ್ಯತಃ ತವಾಭದ್ರಾ, ಅಭದ್ರೇ ಜಾಠರಾಧಮೌ ।
ಲೋಕಾನ್ ಸಪಾಲಾನ್ ತ್ರೀನ್ ಚಂಡ್‌ಮುಹುಃ ಆಕ್ರಂದಯಿಷ್ಯತಃ ॥

ಪುತ್ರಸ್ಯೈವ ಚ ಪುತ್ರಾಣಾಂ ಭವಿತೈಕಃ ಸತಾಂ ಮತಃ ।
ಗಾಯಂತಿ ಯದ್ಯಶಃ ಶುದ್ಧಂ ಭಗವದ್ಯಶಸಾ ಸಮಮ್ ॥ (15-7, 38, 44)

ಈ ಹಿರಣ್ಯಾಕ್ಷ ಹಿರಣ್ಯಕಶಿಪು ದೈತ್ಯರಾಗಿ ಹುಟ್ಟಿದ್ದಕ್ಕೆ ದಿತಿಯ ಅವಿವೇಕವಲ್ಲದೆ ಇನ್ನೂ ಒಂದು ಹಿನ್ನೆಲೆ ಇದೆ. ಒಮ್ಮೆ ಸನಕಾದಿ ಬ್ರಹ್ಮನ ನಾಲ್ಕು ಜನ ಕುಮಾರರು ಭಗವಂತನ ದರ್ಶನಕ್ಕೆ ತೆರಳಿದಾಗ ವೈಕುಂಠದ ದ್ವಾರಪಾಲಕರಾದ ಜಯ ವಿಜಯರು ಅವರನ್ನು ತಡೆಯುವರು. ಆಗ ಅವರು ನೀವು ವೈಕುಂಠದಲ್ಲಿ ಇರಲು ಯೋಗ್ಯರಲ್ಲ ಭೂಲೋಕದಲ್ಲಿ ಜನಿಸಿರಿ ಎಂದು ಶಾಪಕೊಟ್ಟರು.

ತನ್ನ ದ್ವಾರಪಾಲಕರು ಋಷಿಕುಮಾರರಿಗೆ ಮಾಡಿದ ಅಪಚಾರವನ್ನು ಪರಿಹರಿಸಲು ಭಗವಂತನು ಸ್ವತಃ ಬಾಗಿಲವರೆಗೆ ಬಂದು ಸನಕಾದಿಗಳಿಗೆ ದರ್ಶನವನ್ನು ಕೊಟ್ಟನು. ದ್ವಾರಪಾಲಕರು ಪಶ್ಚಾತ್ತಾಪವುಳ್ಳವರಾಗಿ ಋಷಿಗಳ ಶಾಪದಿಂದ ಪಾರುಮಾಡಬೇಕೆಂದು ಭಗವಂತನನ್ನು ಪ್ರಾರ್ಥಿಸಿದರು. ಆಗ ಭಗವಂತನು ನೀವು ಶಾಪವನ್ನು ಅನುಭವಿಸಬೇಕು. ಆದರೆ ಅದನ್ನು ಸ್ವಲ್ಪ ಕಡಿಮೆ ಮಾಡಬಹುದು. ನನ್ನ ಭಕ್ತರಾಗಿ ಜನಿಸಬೇಕೆಂಬ ಅಪೇಕ್ಷೆಯಿದ್ದರೆ

ಆರುಜನ್ಮ ಭೂಲೋಕದಲ್ಲಿ ಜನ್ಮ ತಾಳಬೇಕು. ನನ್ನ ದ್ವೇಷಿಗಳಾಗಿ ಜನಿಸಬೇಕಾದರೆ ಮೂರುಜನ್ಮ ಸಾಕು ಎಂದು ಹೇಳುವರು. ಆಗ ಜಯವಿಜಯರು ಬೇಗನೇ ಉದ್ಧಾರವಾಗಬೇಕು ಎಂಬ ಅಪೇಕ್ಷೆಯಿಂದ ನಿನ್ನ ದ್ವೇಷಿಗಳಾಗಿ ಜನಿಸಿ ನಿನ್ನಿಂದಲೇ ಮರಣವನ್ನು ಪಡೆಯುವಂತೆ ಅನುಗ್ರಹಿಸು ಎಂದು ಪ್ರಾರ್ಥಿಸುವರು. ಈ ಜಯ ವಿಜಯರ ಮೊದಲನೆಯ ಜನ್ಮವೇ ಹಿರಣ್ಯಕಶಿಪು-ಹಿರಣ್ಯಾಕ್ಷ ಎಂದು ಮೈತ್ರೇಯರು ವಿದುರನಿಗೆ ತಿಳಿಸುವರು.

ಮಾನಸಾ ಮೇ ಸುತಾ ಯುಷ್ಮತ್ ಪೂರ್ವಂ ವೈ ಸನಕಾದಯಃ ।
ಚೇರುಃ ವಿಹಾಯಸಾ ಲೋಕಾನ್ ಲೋಕೇಷು ವಿಗತಸ್ಪೃಹಾಃ ॥

ತೇ ಏಕದಾ ಭಗವತೋ ವೈಕುಂಠಸ್ಯಾಮಲಾತ್ಮನಃ ।
ಯಯುಃ ವೈಕುಂಠನಿಲಯಂ ಸರ್ವಲೋಕನಮಸ್ಕೃತಮ್ ॥

ತಾನ್‌ವೀಕ್ಷ್ಯ ವಾತರಶನಾನ್ ಚತುರಃ ಕುಮಾರಾನ್ ।
ವೃದ್ಧಾನ್ ದಶಾರ್ಧವಯಸೋ ವಿದಿತಾತ್ಮತತ್ತ್ವಾನ್
ವೇತ್ರೇಣಾಸ್ಖಲಯತಾಮತದರ್ಹಣೌ ತೌ
ತೇಜೋ ವಿಹಸ್ಯ ಭಗವತ್ ಪ್ರತಿಕೂಲಶೀಲೌ
ತದ್‌ವಾ ಅಮುಷ್ಯ ಪರಮಸ್ಯ ವಿಕುಂಠಭರ್ತುಃ
ಕರ್ತುಂ ನ ಯುಕ್ತಮಿತಿಧೀಮಹಿ ಮಂದಧೀಭ್ಯಾಮ್
ಲೋಕಾನಿತೋ ವ್ರಜತಮಂತರ ಭಾವದೃಷ್ಟ್ಯಾ
ಪಾಪೀಯಸಃ ತ್ರಯ ಇಮೇ ರಿಪವೋಸ್ಯ ಯತ್ರ ॥ (16-12, 13, 30, 34)

ಭಗವಾನನುಗಾವಾಹ ಮಾಭೈಷ್ಟಂ ಅಸ್ತು ಶಮ್ ।
ಬ್ರಹ್ಮತೇಜಃ ಸಮರ್ಥೋಽಪಿ ಹಂತುಂ ನೇಚ್ಛೇ ಮತಂ ತು ಮೇ ॥ (17-29)

ದೇವಹೂತಿ ಮತ್ತು ಕರ್ದಮರ ವೃತ್ತಾಂತ

ಭಗವಂತನು ಹಿರಣ್ಯಾಕ್ಷನನ್ನು ಸಂಹಾರಮಾಡಿ ಸ್ವಾಯಂಭುವ ಮನುವಿಗೂ ಅವನ ಹೆಣ್ಣುಮಕ್ಕಳು ಮತ್ತು ಅಳಿಯಂದಿರಿಗೂ ಭೂಮಿಯ ಮೇಲೆ ಸ್ಥಳವನ್ನು ಮಾಡಿಕೊಟ್ಟ ವಿಷಯವನ್ನು ತಿಳಿದುಕೊಂಡಮೇಲೆ ವಿದುರನು ಸ್ವಯಂಭುವನ ಮಗಳಾದ ದೇವಹೂತಿಯು ಕರ್ದಮನ ಮದುವೆಯಾಗಿ ಪರಮಾತ್ಮನನ್ನೇ ಕಪಿಲನಾಮಕನಾಗಿ ಪುತ್ರನನ್ನಾಗಿ ಪಡೆದ ವಿಷಯವನ್ನು ವಿಸ್ತಾರವಾಗಿ ತಿಳಿದುಕೊಳ್ಳಲು ಮೈತ್ರೇಯರಿಗೆ ಪ್ರಶ್ನೆಗಳನ್ನು ಮಾಡುವನು.

ತಸ್ಯವೈ ದುಹಿತಾ ಬ್ರಹ್ಮನ್ ದೇವಹೂತೀತಿ ವಿಶ್ರುತಾ ।
ಪತ್ನೀಪ್ರಜಾಪತೇರುಕ್ತಾ ಕರ್ದಮಸ್ಯ ತ್ವಯಾನಘ ।
ತಸ್ಯಾಂ ಸ ಮಹಾಯೋಗೀ ಯುಕ್ತಾಯಾಂ ಯೋಗಲಕ್ಷಣೈಃ
ಸಸರ್ಜ ಕತಿಧಾವೀರ್ಯಂ ತನ್ಮೇ ಶುಶ್ರೂಷವೇ ವದ ॥ (22-3, 4)

ಸಂತಾನವನ್ನು ಪಡೆ ಎಂದು ಬ್ರಹ್ಮನಿಂದ ಆಜ್ಞಪ್ತನಾದ ಕರ್ದಮನು ಮೊದಲು ಸರಸ್ವತೀ ನದೀ ದಂಡೆಯ ಮೇಲೆ ಒಂದು ಸಾವಿರ ವರ್ಷಕಾಲ ತಪಸ್ಸನ್ನು ಮಾಡುವನು. ಆಗ ಭಗವಂತನು ಅವನಿಗೆ ಪ್ರತ್ಯಕ್ಷನಾಗುವನು. ಸ್ವಾಯಂಭುವ ಮನುವು ಸ್ವತಃ ಬಂದು ನಿನಗೆ ತನ್ನ ಮಗಳನ್ನು ಕೊಡುವನು. ಅವಳೊಡನೆ ಗೃಹಸ್ಥಧರ್ಮವನ್ನು ಆಚರಿಸು. ಸಕಲ ಪ್ರಾಣಿಗಳಿಗೆ ಅಭಯವನ್ನು ಕೊಡುವುದೇ ಗೃಹಸ್ಥಧರ್ಮ. ಅದನ್ನು ಅನುಸರಿಸು. ನಿನಗೆ ಒಂಬತ್ತು ಜನ ಹೆಣ್ಣು-ಮಕ್ಕಳಾಗುವರು. ನಾನೇ ನಿನ್ನಲ್ಲಿ ಮಗನಾಗಿ ಅವತರಿಸುವೆನು ಎಂದು ಹೇಳಿ ಭಗವಂತನು ಅಂತರ್ಧಾನ ಹೊಂದುವನು.

ಪ್ರಜಾಃ ಸೃಜೇತಿ ಭಗವಾನ್ ಕರ್ದಮೋ ಬ್ರಹ್ಮಣೋದಿತಃ ।
ಸರಸ್ವತ್ಯಾಂ ತಪಸ್ತೇಪೇ ಸಹಸ್ರಾಣಾಂ ಸಮಾದಶ ।

ತತಃ ಸಮಾಧಿಯುಕ್ತೇನ ಕ್ರಿಯಾಯೋಗೇನ ಸರ್ವಶಃ ।
ಸಂಪ್ರಪೇದೇ ಹರಿಂಭಕ್ತ್ಯಾ ಪ್ರಪನ್ನವರದಾಶುಷಮ್ ॥

ಪ್ರಜಾಪತಿಪತಿಃ ಸಮ್ರಾಟ್ ಮನುಃ ವಿಖ್ಯಾತಮಂಗಲಃ ।
ಆತ್ಮಜಾಮಸಿತಾಪಾಂಗೀಂ ವಯಃ ಶೀಲಗುಣಾನ್ವಿತಾಮ್ ।
ಮೃಗಯಂತೀಪತಿಂ ದಾಸ್ಯತ್ಯನುರೂಪಾಯ ತೇ ಪ್ರಭುಃ ।
ಯಾ ತೇ ಆತ್ಮಧೃತಂ ವೀರ್ಯಂ ನವಧಾಪ್ರಸವಿಷ್ಯತಿ ।
ಸಂಭೂಯ ಸ್ವಾಂಶಕಲಯಾ ತ್ವದ್ವೀರ್ಯೇಣ ಮಹಾಮತೇ ।
ತವ ಕ್ಷೇತ್ರೇ ದೇವಹೂತ್ಯಾಂ ಪ್ರಣೇಷ್ಯೇ ತತ್ತ್ವ ಸಂಹಿತಾಮ್ ॥ (22-6, 7, 25, 27, 29, 32)

ಬಿಂದು ಸರೋವರದ ವರ್ಣನೆ, ವಿಮಾನಗೃಹದ ವರ್ಣನೆ

ಈ ಎಲ್ಲ ಘಟನೆಯು ಬಿಂದು ಸರೋವರದ ದಂಡೆಯ ಮೇಲೆ ನಡೆಯಿತು. ಕರ್ದಮನ ತಪಸ್ಸಿಗೆ ಮೆಚ್ಚಿ ಭಗವಂತನು ಸುರಿಸಿದ ಆನಂದಕಣ್ಣೀರಿನ ಹನಿಗಳು ತುಂಬಿ ಈ ಸರೋವರವಾದ್ದರಿಂದ ಇದಕ್ಕೆ ಬಿಂದು ಸರೋವರ ಎಂಬ ಹೆಸರು ಉಂಟಾಯಿತು. ಈ ಸರೋವರದ ಪರಿಸರವನ್ನು ಭಾಗವತದಲ್ಲಿ ಸುಂದರವಾಗಿ ವರ್ಣಿಸಲಾಗಿದೆ.

ಈ ಸರೋವರದ ದಂಡೆಯ ಮೇಲೆ ಹೂವು ಸುರಿದ ಮರಗಳೂ ಬಳ್ಳಿಗಳೂ ಇದ್ದವು. ಸಾಲು ಸಾಲಾಗಿ ಹಬ್ಬಿದ ಬೆಟ್ಟಗಳು ಇದಕ್ಕೆ ಹಿನ್ನೆಲೆಯಾಗಿದ್ದವು. ಕದಂಬ ಚಂಪಕ ಅಶೋಕ ಬಕುಲ ಕುಂದ ಮಂದಾರ ಇತ್ಯಾದಿ ಹೂವುಗಳ ಸುರಿಮಳೆಯೇ ಸುತ್ತಲೂ ಆಗುತ್ತಿತ್ತು. ಹಂಸ ಸಾರಸ ಬಕ ಚಕ್ರವಾಕ ಮೊದಲಾದ ಪಕ್ಷಿಗಳಿಂದ ಈ ಸರೋವರವು ತುಂಬಿತ್ತು. ಬಿಂದುಸರೋವರದ ಸೌಂದರ್ಯದ ಈ ವರ್ಣನೆ ನಮ್ಮ ಋಷಿಮುನಿಗಳ ನಿಸರ್ಗ ಪ್ರೇಮವನ್ನು ವ್ಯಕ್ತಪಡಿಸುತ್ತದೆ.

ಪುಷ್ಪದ್ರುಮಲತಾಜಾಲೈಃ ಕೂಜತ್ ಪುಣ್ಯಮೃಗದ್ವಿಜೈಃ ।
ಸರ್ವರ್ತುರ್ ಫಲಪುಷ್ಪಾಢ್ಯಂ ವನರಾಜಿಶ್ರಿಯಾನ್ವಿತಮ್ ।
ಕದಂಬ ಚಂಪಕಾಶೋಕ ಕರಂಜಬಕುಲಾಸನೈಃ ।
ಕುಂದಮಂದಾರ ಕುಟಜೈಃ ಚೂತಪೋತೈರಲಂಕೃತಮ್ ।
ಕಾರಂಡವೈಃ ಬಕೈಃ ಹಂಸೈಃ ಕುರರೈಃ ಜಲ ಕುಕ್ಕುಟೈಃ ।
ಸಾರಸೈಃ ಚಕ್ರವಾಕೈಶ್ಚ ಚಕೋರೈಃ ವಲ್ಗುಕೂಜಿತಮ್ ॥
ಶಶಕೈಃ ಹರಿಣೈಃ ಕ್ರೋಡೈಃ ಶ್ವವಿಡ್‌ಗವಯ ಕುಂಜರೈಃ ।
ಗೋಪುಚ್ಛೈಃ ಹರಿಭಿಃ ಮರ್ಕೈಃ ನಕುಲೈಃ ನಾಭಿಭಿಃ ವೃತಮ್ ॥ (22-40, 42, 43, 44)

ಈ ಬಿಂದುಸರೋವರಕ್ಕೆ ಸ್ವಾಯಂಭುವಮನು ಸ್ವತಃ ಬಂದು ದೇವಹೂತಿಯನ್ನು ಕರ್ದಮನಿಗೆ ಕೊಟ್ಟು ವೈಭವದಿಂದ ಮದುವೆ ಮಾಡಿದನು. ದೇವಹೂತಿಯು ಬಹಳ ನಿಷ್ಠೆಯಿಂದ ಪತಿಯ ಸೇವೆಯನ್ನು ಮಾಡಿ ತಮ್ಮ ಪ್ರೇಮಕ್ಕೆ ಅನುಗುಣವಾದ ಒಂದು ಸುಂದರವಾದ ಮನೆಯನ್ನು ತಮ್ಮ ದಾಂಪತ್ಯಜೀವನದ ಸರಸ ಸಲ್ಲಾಪಕ್ಕಾಗಿ ಕಟ್ಟಿಸಿ-ಕೊಡಬೇಕೆಂದು ಪತಿಯನ್ನು ಪ್ರಾರ್ಥಿಸುವಳು. ಆಗ ಕರ್ದಮನು ಭೂಲೋಕದ ಸುತ್ತಲೂ ಸಂಚರಿಸಲು ಬರುವಂಥ ಒಂದು ಸುಂದರವಾದ ವಿಮಾನವನ್ನೇ ಸೃಷ್ಟಿಸಿ ಅದರಲ್ಲಿ ವಾಸಕ್ಕೂ ವಿಹಾರಕ್ಕೂ ಎಲ್ಲ ಅನುಕೂಲತೆಗಳನ್ನು ಒದಗಿಸು-ವನು. ಭಾಗವತದಲ್ಲಿ ಬರುವ ಈ ವಿಮಾನದ ಮನೆಯ ವರ್ಣನೆ ಆಧುನಿಕ ಕೋಟ್ಯಾಧೀಶರ ಮನೆಯನ್ನು ಮೀರಿಸು-ವಂಥದಾಗಿದೆ.

ಈ ವಿಮಾನದ ಮನೆಗೆ ಅನೇಕ ಅಂತಸ್ತುಗಳು ಇದ್ದವು. ಒಂದೊಂದು ಅಂತಸ್ತಿನಲ್ಲಿಯೂ ರೇಶಿಮೆಯ ಹಾಸಿಗೆಗಳಿರುವ ಶಯ್ಯಾಗೃಹಗಳಿದ್ದವು. ಬಾಗಿಲು ಕಿಟಕಿಗಳಿಗೆ ಚಿತ್ರವಿಚಿತ್ರವಾದ ಪರದೆಗಳು ಇದ್ದವು. ವಿಶಾಲವಾದ ಬಟ್ಟೆಯ ಬೀಸಣಿಕೆಗಳು ಇದ್ದವು. ರತ್ನದ ಕಂಬಗಳಿದ್ದವು. ಅವುಗಳಿಗೆ ನಾನಾ ಹೂವುಗಳ ಮಾಲೆಗಳನ್ನು

ತೂಗುಹಾಕಲಾಗಿತ್ತು. ಮನೆತನಕ್ಕೆ ಬೇಕಾಗುವ ಎಲ್ಲ ಪಾತ್ರೆಗಳೂ ಸಾಮಾನುಗಳೂ ಇದ್ದವು. ಬಾಗಿಲಿಗೆ ಹವಳುಗಳ ಹೊಸ್ತಿಲಗಳು ಅಲ್ಲಲ್ಲಿ ಕೂಡಲು ಹವಳದ ಕಟ್ಟೆಗಳು ಇದ್ದವು. ವಿಹಾರದ ಸ್ಥಾನಗಳಿದ್ದವು. ಸರೋವರಗಳೂ ಅವುಗಳಲ್ಲಿ ಒಳಮನೆಗಳೂ ಇದ್ದವು. ಅಲ್ಲಲ್ಲಿ ಸೇವಕಿಯರಿದ್ದರು. ಈ ಮನೆಯಲ್ಲಿಂದ ಭೂಲೋಕವನ್ನೆಲ್ಲ ಕರ್ದಮನು ತನ್ನ ಪ್ರಿಯಪತ್ನಿಗೆ ತೋರಿಸಿದನು. ದೇವಲೋಕದ ನಂದನವನ, ಚೈತ್ರರಥ ಉದ್ಯಾನ, ಮಾನಸ ಸರೋವರಗಳಲ್ಲಿಯೂ ಪತ್ನಿಯೊಡನೆ ವಿಹಾರ ಮಾಡಿ ಆಶ್ರಮಕ್ಕೆ ತಿರುಗಿ ಬಂದನು.

ಪ್ರಿಯಾಯಾಃ ಪ್ರಿಯಮನ್ವಿಚ್ಛನ್ ಕರ್ದಮೋ ಯೋಗಮಾಸ್ಥಿತಃ ।
ವಿಮಾನಂ ಕಾಮಗಂ ಕ್ಷತ್ತಃ ತರ್ಹ್ಯೇವಾವಿರಚೀಕರತ್ ॥

ಸರ್ವಕಾಮದುಘಂ ದಿವ್ಯಂ ಸರ್ವರತ್ನಸಮನ್ವಿತಮ್ ।
ಸರ್ವರ್ಧ್ಯುಪಚಯೋದರ್ಕಂ ಮಣಿಸ್ತಂಭೈಃ ಉಪಸ್ಕೃತಮ್ ॥

ದಿವ್ಯೋಪಸ್ಕರಣೋಪೇತಂ ಸರ್ವಕಾಲ ಸುಖಾವಹಮ್ ।
ಪಟ್ಟಿಕಾಭಿಃ ವಿಚಿತ್ರಾಭಿಃ ಪತಾಕಾಭಿರಲಂಕೃತಮ್ ॥

ಸ್ರಗ್ಭಿಃ ವಿಚಿತ್ರಮಾಲಾಭಿಃ ಮಂಜುಸಿಂಜತ್ ಷಡಂಘ್ರಿಭಿಃ ।
ದುಕೂಲಕ್ಷೌಮಕೌಶೇಯ್ಯೈಃ ನಾನಾವಸ್ತ್ರೈಃ ವಿರಾಜಿತಮ್ ॥

ಉಪರ್ಯುಪರಿವಿನ್ಯಸ್ತನಿಲಯೇಷು ಪೃಥಕ್ ಪೃಥಕ್ ।
ಕ್ಲುಪ್ತೈಃ ಕಶಿಪುಭಿಃ ಕಾಂತಂ ಪರ್ಯಂಕ ವ್ಯಜನಾಸನೈಃ ॥

ತತ್ರ ತತ್ರ ವಿನಿಕ್ಷಿಪ್ತ ನಾನಾಶಿಲ್ಪೋಪಶೋಭಿತಮ್ ।
ಮಹಾಮರಕತಸ್ಥಾಲ್ಯಾ ಜುಷ್ಟಂ ವಿದ್ರುಮವೇದಿಭಿಃ ॥

ದ್ವಾರಿವಿದ್ರುಮದೇಹಲ್ಯಾ ಭಾತಂ ವಜ್ರಕಾಪಟಿಮತ್ ।
ಶಿಖರೇಷ್ವಿಂದ್ರನೀಲೇಷು ಹೇಮಕುಂಭೈರಭಿಷ್ಠಿತಮ್ ॥

ವಿಹಾರಸ್ಥಾನ ಶಯನ ಸಂವೇಶ ಪ್ರಾಂಗಣಾಜಿರೈಃ ।
ಯಥೋಪಜೋಷಂ ರಚಿತೈಃ ವಿಸ್ಮಾಪನಮಿವಾತ್ಮನಃ ।
ಸಾಂತಃ ಸರಸಿ ವೇಶ್ಮಸ್ಥಾಃ ಶತಾನಿ ದಶಕನ್ಯಕಾಃ ॥ (24-12 ರಿಂದ 18, 21-26)

ವೈಸ್ರಂಭಕೇ ಸುರವನೇ ನಂದನೇ ಪುಷ್ಪಭದ್ರಕೇ ।
ಮಾನಸೇ ಚೈತ್ರರಥ್ಯೇಚ ಸ ರೇಮೇ ರಮಯಾ ಸಹ ॥

ಪ್ರೇಕ್ಷಯಿತ್ವಾ ಭುವೋಗೋಲಂ ಪತ್ನ್ಯೈ ಯಾವನ್ ಸ್ವಸಂಸ್ಥಯಾ ।
ಬಹ್ವಾಶ್ಚರ್ಯಂ ಮಹಾಯೋಗೀ ಸ್ವಾಶ್ರಮಾಯ ನ್ಯವರ್ತತ ।

ಹೀಗೆ ವಿಮಾನಗೃಹದಲ್ಲಿ ಮಧುಚಂದ್ರವನ್ನು ಮುಗಿಸಿಕೊಂಡು ಬಂದಮೇಲೆ ಕರ್ದಮನು ತನ್ನ ಯೋಗಶಕ್ತಿಯಿಂದ ಒಂಬತ್ತು ರೂಪಗಳನ್ನು ತಾಳಿ ತನ್ನ ಪತ್ನಿ ದೇವಹೂತಿಗೂ ಒಂಬತ್ತು ರೂಪಗಳನ್ನು ಕೊಟ್ಟು ನೂರು ವರ್ಷಗಳ ಕಾಲ ವಿಹಾರ ಮಾಡಿ ಒಂಬತ್ತು ಜನ ಹೆಣ್ಣುಮಕ್ಕಳನ್ನು ಪಡೆದನು.

ವಿಭಜ್ಯ ನವಧಾತ್ಮಾನಂ ಮಾನವೀಂ ಸುರತೋತ್ಸುಕಾಮ್ ।
ರಾಮಾಂ ನಿರಮಯನ್ ರೇಮೇ ವರ್ಷಪೂಗಾನ್ ಮುಹೂರ್ತವತ್ ॥

ತಸ್ಯಾಮಾಧತ್ತ ರೇತಸ್ತಾಂ ಭಾವಯನ್ನಾತ್ಮನಾತ್ಮವಿತ್ ।
ನವಧಾ ವಿಧಾಯ ರೂಪಂ ಸ್ವಂ ಸತ್ಯಸಂಕಲ್ಪವಿತ್ ವಿಭುಃ ॥

ತತಸ್ತಾಃ ಸುಷುವೇ ಸದ್ಯಃ ದೇವಹೂತಿಃ ಸ್ತ್ರಿಯಃ ಪ್ರಜಾಃ ।
ಸರ್ವಾಃ ತಾಃ ಚಾರುಸರ್ವಾಂಗ್ಯಃ ಲೋಹಿತೋತ್ಪಲಗಂಧಯಃ ॥ (24-44, 47, 48)

ಭಗವಂತನು ಈ ಮೊದಲೇ ತಾನು ಸೂಚಿಸಿದಂತೆ ದೇವಹೂತಿಯ ಉದರದಲ್ಲಿ ಪುತ್ರನಾಗಿ ಅವತರಿಸುವನು.

ತಸ್ಯಾಂ ಬಹುತಿಥೇ ಕಾಲೇ ಭಗವಾನ್ ಮಧುಸೂದನಃ ।
ಕಾರ್ದಮಂ ವೀರ್ಯಮಾಪನ್ನೋಜಜ್ಞೇ ಅಗ್ನಿರಿವ ದಾರುಣಿ ॥ (25-6)

ಮುಂದೆ ಕರ್ದಮನು ತನ್ನ ಒಂಬತ್ತು ಜನ ಹೆಣ್ಣುಮಕ್ಕಳನ್ನು ಒಂಬತ್ತು ಋಷಿಗಳಿಗೆ ವೈಭವದಿಂದ ಮದುವೆ ಮಾಡಿಕೊಡುವನು. ಮರೀಚಿ, ಅತ್ರಿ ಅಂಗಿರಸ ಪುಲಸ್ತ್ಯ ಪುಲಹ ಕ್ರತು ಭೃಗು ವಸಿಷ್ಠ ಅಥರ್ವಣ ಈ ಒಂಬತ್ತು ಋಷಿಗಳಿಗೆ ಕಲಾ ಅನಸೂಯಾ ಶ್ರದ್ಧಾ ಹವಿರ್ಭುವಾ ಗತಿ ಕ್ರಿಯಾ ಖ್ಯಾತಿ ಅರುಂಧತೀ ಮತ್ತು ಶಾಂತಿ ಎಂಬ ತನ್ನ ಒಂಬತ್ತು ಹೆಣ್ಣುಮಕ್ಕಳನ್ನು ಕೊಟ್ಟು ಮದುವೆ ಮಾಡಿದನು.

ಮರೀಚಯೇ ಕಲಾಂ ಪ್ರಾದಾದನುಸೂಯಾಮಥಾತ್ರಯೇ ।
ಶ್ರದ್ಧಾಮಂಗಿರಸೇ ಯಚ್ಛತ್ ಪುಲಸ್ತ್ಯಾಯ ಹವಿರ್ಭುವಮ್ ॥
ಪುಲಹಾಯ ಗತಿಂ ಯುಕ್ತಾಂ ಕ್ರತವೇ ಚ ಕ್ರಿಯಾಂ ಸತೀಮ್ ।
ಖ್ಯಾತಿಂ ಚ ಭೃಗವೇ ಯಚ್ಛದ್ ವಸಿಷ್ಠಾಯಾಪಿ ಅರುಂಧತೀಮ್ ।
ಅಥರ್ವಣೇ ದದಾತ್ ಶಾಂತಿಂ ಯಯಾ ಯಜ್ಞಃ ವಿತನ್ಯತೇ ॥ (25-22,23,24)

ಕರ್ದಮನ ವನಗಮನ

ತನ್ನ ಗೃಹಸ್ಥಧರ್ಮದ ಹೊಣೆಯನ್ನು ತೀರಿಸಿದ ಕರ್ದಮನು ತನ್ನ ಪುತ್ರನಾಗಿ ಅವತರಿಸಿದ ಕಪಿಲನು ಅವನ ತಾಯಿ ದೇವಹೂತಿಗೆ ಜ್ಞಾನೋಪದೇಶ ಮಾಡುವನೆಂಬ ಆಶ್ವಾಸನೆಯನ್ನು ಪಡೆದು ಕಪಿಲನಿಗೆ ಪ್ರದಕ್ಷಿಣೆ ಮಾಡಿ ವನಕ್ಕೆ ತೆರಳುವನು. ವನದಲ್ಲಿ ಸದಾಕಾಲವೂ ಭಗವಂತನ ಚಿಂತನೆಯಲ್ಲಿಯೇ ನಿರತನಾಗಿ ಅಹಂಕಾರ ಮಮಕಾರಗಳನ್ನು ತೊರೆದು ನಿಸ್ಸಂಗನಾಗಿ ಸರ್ವಭೂತಗಳಲ್ಲಿಯೂ ಭಗವಂತನು ಇರುವುದನ್ನು ಸರ್ವಭೂತಗಳೂ ಅವನನ್ನೇ ಆಶ್ರಯಿಸಿ-ಕೊಂಡಿರುವುದನ್ನು ತಿಳಿದುಕೊಂಡು ಇಚ್ಛಾದ್ವೇಷರಹಿತನಾಗಿ ಭಕ್ತಿಯೋಗದಿಂದ ಸದ್ಗತಿಯನ್ನು ಪಡೆದನು.

ಮಾತ್ರೇ ಆಧ್ಯಾತ್ಮಿಕೀಂ ವಿದ್ಯಾಂ ಶಮನೀಂ ಸರ್ವಕರ್ಮಣಾಮ್ ।
ವಿತರಿಷ್ಯೇ ಯಯಾ ಚಾಸೌ ಭಯಂಚಾತಿತರಿಷ್ಯತಿ ॥
ಏವಂ ಸಮುದಿತಃ ತೇನ ಕಪಿಲೇನ ಪ್ರಜಾಪತಿಃ ।
ಪ್ರದಕ್ಷಿಣೀಕೃತ್ಯ ತಂ ಪ್ರೀತೋ ವನಮೇವ ಜಗಾಮಹ ॥
ನಿರಹಂಕೃತಿಃ ನಿರ್ಮಮಶ್ಚ ನಿರ್ದ್ವಂದ್ವಃ ಸಮದೃಕ್ ಸ್ವದೃಕ್ ।
ಪ್ರತ್ಯಗ್ರಃ ಶಾಂತಧೀಃ ಧೀರಃ ಪ್ರಶಾಂತೋರ್ಮಿರಿವೋದಧಿಃ ॥
ಆತ್ಮಾನಂ ಸರ್ವಭೂತೇಷು ಭಗವಂತಮವಸ್ಥಿತಮ್ ।
ಅಪಶ್ಯತ್ ಸರ್ವಭೂತಾನಿ ಭಗವತ್ಯಪಿ ಚಾತ್ಮನಿ ॥
ಇಚ್ಛಾದ್ವೇಷವಿಹೀನೇನ ಸರ್ವತ್ರ ಸಮಚೇತಸಾ ।
ಭಗವದ್ಭಕ್ತಿ ಯೋಗೇನ ಪ್ರಾಪ್ತೋ ಭಗವತೀಂ ಗತಿಮ್ ॥ (25-41,42,45,46,48)

ಕಪಿಲನಿಂದ ತಾಯಿಗೆ ಉಪದೇಶ

ತಂದೆ ಕರ್ದಮನು ಅರಣ್ಯಕ್ಕೆ ತೆರಳಿದ ಮೇಲೆ ಕಪಿಲನು ತಾಯಿಯ ಮೇಲಿನ ಪ್ರೀತಿಯಿಂದ ಬಿಂದುಸಾರ ತೀರದಲ್ಲಿಯ ಆಶ್ರಮದಲ್ಲಿಯೇ ಇರುವನು. ತಾಯಿಯು ತತ್ತ್ವೋಪದೇಶವನ್ನು ಮಾಡಬೇಕೆಂದು ಅವನನ್ನು ಪ್ರಾರ್ಥಿಸುವಳು. ಆಗ ಅವನು ತತ್ತ್ವೋಪದೇಶವನ್ನು ಆರಂಭಿಸಿ ಮೊದಲು ಸಾಧುಗಳ ಲಕ್ಷಣವನ್ನು ಹೇಳುವನು.

ಪಿತರಿ ಪ್ರಸ್ಥಿತೇऽರಣ್ಯಂ ಮಾತುಃ ಪ್ರಿಯ ಚಿಕೀರ್ಷಯಾ ।
ತಸ್ಮಿನ್ ಬಿಂದುಸರೇऽವಾತ್ಸೀತ್ ಭಗವಾನ್ ಕಪಿಲಃ ಕಿಲ ॥ (26-5)

ಪರಮಾತ್ಮನು ಪ್ರಕೃತಿಗಿಂತ ಮೇಲಿನವನು. ಜ್ಞಾನಸ್ವರೂಪನು, ಸೂಕ್ಷ್ಮರೂಪನು. ಜ್ಞಾನಭಕ್ತಿವೈರಾಗ್ಯಗಳಿಂದ ಕೂಡಿದ ಭಕ್ತಿಯೋಗದಿಂದ ಪರಮಾತ್ಮನನ್ನು ಕಾಣಬಹುದು. ಪ್ರಕೃತಿಯು ಉದಾಸೀನವಾದುದು ಜಡವಾದುದು. ಅದಕ್ಕೆ ಸ್ವತಃ ಕರ್ತೃತ್ವವಿಲ್ಲ. ಅಹಂ ಮಮ ಎಂಬ ಅಭಿಮಾನವನ್ನು ಬಿಟ್ಟವರೂ ಕಾಮಲೋಭ ರಹಿತರೂ ಇವನನ್ನು ತಿಳಿದುಕೊಳ್ಳಬಲ್ಲರು. ಸಾಧುಗಳು ಕರುಣಾಶಾಲಿಗಳು. ಸಹಿಷ್ಣುತೆಯುಳ್ಳವರು. ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸ್ನೇಹವುಳ್ಳವರು. ಅಜಾತ ಶತ್ರುಗಳು. ನನ್ನಲ್ಲಿ ಭಕ್ತಿಯನ್ನು ಮಾಡುತ್ತ ಎಲ್ಲ ಕರ್ಮಗಳನ್ನೂ ನನ್ನಲ್ಲಿಯೇ ಸಮರ್ಪಿಸುವರು. ಪ್ರಕೃತಿ ಮತ್ತು ಜೀವರಿಗಿಂತ ಉತ್ತಮನಾದ ನನ್ನ ಆಜ್ಞೆಯಂತೆಯೇ ಅಗ್ನಿ ವಾಯು ಇಂದ್ರ ಇವರೆಲ್ಲ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುವರು. ಜ್ಞಾನವೈರಾಗ್ಯಯುಕ್ತ ಭಕ್ತಿಯಿಂದಲೇ ಯೋಗಿಗಳು ನನ್ನ ಪಾದಮೂಲವನ್ನು ಸೇರುವರು ಎಂದು ಕಪಿಲನು ತಾಯಿಗೆ ಉಪದೇಶಿಸುವನು.

> **ಅಹಂ ಮಮಾಭಿಮಾನೋತ್ಥೈಃ ಕಾಮಲೋಭಾದಿನಿರ್ಮಲೈಃ ।**
> **ವೀತಂ ಯದಾತ್ಮನಃ ಶುದ್ಧಿಮದುಃಖಮಸುಖಂ ಸಮಮ್ ॥**
> **ತದಾ ಪುರುಷ ಆತ್ಮಾನಂ ಕೇವಲಂ ಪ್ರಕೃತೇಃ ಪರಮ್ ।**
> **ನಿರಂತರಂ ಸ್ವಯಂಜ್ಯೋತಿಃ ಅಣಿಮಾನಮಖಂಡಿತಮ್ ॥**
> **ಜ್ಞಾನವೈರಾಗ್ಯಯುಕ್ತೇನ ಭಕ್ತಿಯೋಗೇನ ಚಾತ್ಮನಾ ।**
> **ಪರಿಪಶ್ಯತ್ಯುದಾಸೀನಾಂ ಪ್ರಕೃತಿಂ ಚ ಹತೌಜಸಾಮ್ ॥**
> **ತಿತಿಕ್ಷವಃ ಕಾರುಣಿಕಾಃ ಸುಹೃದಃ ಸರ್ವದೇಹಿನಾಮ್ ।**
> **ಅಜಾತಶತ್ರವಃ ಶಾಂತಾಃ ಸಾಧವಃ ಸಾಧುಭೂಷಣಾಃ ।**
> **ಮಯ್ಯನನ್ಯಭಾವೇನ ಭಕ್ತಿಂ ಕುರ್ವಂತಿ ತೇದೃಢಾಮ್ ॥** (26-16, 17, 18, 21,22)
> **ಮದ್ಭಯಾತ್ ವಾತಿ ವಾತೋಽಯಮ್ ಸೂರ್ಯಃ ತಪತಿ ಮದ್ಭಯಾತ್ ।**
> **ವರ್ಷತೀಂದ್ರೋ ದಹತ್ಯಗ್ನಿಃ ಮೃತ್ಯುಃ ಚರತಿ ಮದ್ಭಯಾತ್ ॥**
> **ಜ್ಞಾನವೈರಾಗ್ಯಯುಕ್ತೇನ ಭಕ್ತಿಯೋಗೇನ ಯೋಗಿನಃ ।**
> **ಕ್ಷೇಮಾಯ ಪಾದಮೂಲಂ ಮೇ ಪ್ರವಿಶಂತ್ಯಕುತೋ ಭಯಮ್ ॥** (26-42,43)

ಹೀಗೆ ಭಕ್ತಿಯೋಗವನ್ನು ಉಪದೇಶಿಸಿ ಕಪಿಲನು ಪ್ರಾಕೃತಗುಣಗಳಿಂದ ಪಾರಾಗಲು ಸಹಾಯವಾಗಲು ತಾಯಿಗೆ ಪ್ರಾಕೃತ-ತತ್ವಗಳನ್ನು ತಿಳಿಸುವನು. (1) ಪೃಥಿವೀ ಮೊದಲಾದ ಐದು ಮಹಾಭೂತಗಳು (2) ಗಂಧವೇ ಮೊದಲಾದ ಐದು ತನ್ಮಾತ್ರಾಗಳು (3) ಹತ್ತು ಇಂದ್ರಿಯಗಳು (4) ಮನಸ್ಸು ಬುದ್ಧಿ ಅಹಂಕಾರ ಚಿತ್ತ ಈ ನಾಲ್ಕು ಸೇರಿ 24 ತತ್ವಗಳಾಗುವುವು. ಕಾಲವು ಇಪ್ಪತ್ತೈದನೆಯದೆಂದು ಕೆಲವರು ಹೇಳುವರು. ಜೀವನು ಇನ್ನೊಂದು ತತ್ವ, ಇವೆಲ್ಲಕ್ಕೂ ಶ್ರೇಷ್ಠನೂ ನಿಯಾಮಕನೂ ಆದವನು. ಪರಮನು ಪುರುಷ.

> **ಅಥ ತೇ ಸಂಪ್ರವಕ್ಷ್ಯಾಮಿ ತತ್ವಾನಾಂ ಲಕ್ಷಣಮ್ ಪೃಥಕ್ ।**
> **ಯದ್ ವಿದಿತ್ವಾ ವಿಮುಚ್ಯೇತ ಪುರುಷಃ ಪ್ರಾಕೃತೈಃ ಗುಣೈಃ ॥**
> **ಯತ್ ತತ್ ತ್ರಿಗುಣಮವ್ಯಕ್ತಂ ನಿತ್ಯಂ ಸದಸದಾತ್ಮಕಮ್ ।**
> **ಪ್ರಧಾನಂ ಪ್ರಕೃತಿಂ ಪ್ರಾಹುಃ ಅವಿಶೇಷಂ ವಿಶೇಷವತ್ ॥**
> **ಪಂಚಭಿಃ ಪಂಚಭಿಃ ಬ್ರಹ್ಮಚತುರ್ಭಿಃದಶಭಿಃ ತಥಾ ।**
> **ಏತಚ್ಚತುರ್ವಿಂಶತಿಕಂ ಗಣಂ ಪ್ರಾಧಾನಿಕಂ ವಿದುಃ ॥**
> **ಸ ಸನ್ನಿವೇಶೋ ಮಯಾಪ್ರೋಕ್ತಃ ಯಃ ಕಾಲಃ ಪಂಚವಿಂಶಕಃ ।**
> **ಅನಾದಿರಾತ್ಮಾಪುರುಷಃ ನಿರ್ಗುಣಃ ಪ್ರಕೃತೇಃ ಪರಃ**
> **ಪ್ರತ್ಯಗ್‌ಧಾಮಾ ಸ್ವಯಂ ಜ್ಯೋತಿಃ ವಿಶ್ವಂ ಯೇನ ಸಮನ್ವಿತಮ್ ।**
> **ಸ ಏವ ಪ್ರಕೃತಿಂ ಸೂಕ್ಷ್ಮಾಂ ದೇವೀಂ ಗುಣಮಯೀಂ ವಿಭುಃ ।**
> **ಯದೃಚ್ಛಯೈವೋಪಗತಾಮಭ್ಯಪದ್ಯತ ಲೀಲಯಾ ॥** (27-1, 3, 5, 12, 16)

ಹೀಗೆ ಇಪತ್ತನಾಲ್ಕು ತತ್ವಗಳು. ಪರಮಾತ್ಮನು ಇವುಗಳಿಗಿಂತ ಶ್ರೇಷ್ಠನು, ನಿಯಾಮಕನು ಎಂಬುದನ್ನು ಹೇಳಿ ಕಪಿಲನು ಜೀವೇಶ ಭೇದವನ್ನು ನಿರೂಪಿಸುವನು. ಪರಮಾತ್ಮನು ಪ್ರಾಕೃತ ಗುಣಗಳಿಂದ ಬದ್ಧನಾಗುವುದಿಲ್ಲ ಎಂದು ಉಪದೇಶಿಸುವನು.

ಪ್ರಕೃತಿಸ್ಥೋಽಪಿ ಪುರುಷೋ ನಾಜ್ಯತೇ ಪ್ರಾಕೃತೈಃ ಗುಣೈಃ ।
ಯಥೋಲ್ಮುಕಾದ್ ವಿಸ್ಫುಲಿಂಗಾದ್ ಧೂಮಾದ್ವಾಪಿಸ್ವಸಂಭವಾತ್ ॥
ಅಪ್ಯಾತ್ಮತ್ವೇನಾಭಿಮತಾದ್ ದಾಹಕೋಽಗ್ನಿಃ ಪೃಥಜಮತಃ ।
ಭೂತೇಂದ್ರಿಯಾಂತಃಕರಣಾತ್ ಪ್ರಧಾನಾತ್ ಜೀವಸಂಜ್ಞಿತಾತ್ ।
ಆತ್ಮಾ ತಥಾ ಪೃಥಗ್ ದ್ರಷ್ಟಾ ಭಗವಾನ್ ಬ್ರಹ್ಮಸಂಜ್ಞಿತಃ ॥ (29-39,40)

ಬೆಂಕಿಯ ಕಿಡಿಗಳು ಹೊಗೆಯಿಂದ ಭಿನ್ನವಾಗಿರುವಂತೆ ಪರಮಾತ್ಮನು ಪ್ರಕೃತಿ ಮತ್ತು ಜೀವರಿಂದ ಭಿನ್ನನಾಗಿದ್ದಾನೆ. ಹೀಗೆ ತತ್ತ್ವೋಪದೇಶಮಾಡಿ ಭಾಗವತಧರ್ಮಾನುಷ್ಠಾನ ಮಾಡುವವರು ಸದಾಚಾರಿಗಳಾಗಿರಬೇಕು ಎಂದು ತಿಳಿಸುತ್ತ ಸದಾಚಾರದ ಮುಖ್ಯಾಂಶಗಳನ್ನು ಹೇಳುವನು.

ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ತಪ್ಪದೇ ಆಚರಿಸಬೇಕು. ಪರಧರ್ಮಗಳನ್ನು ಆಚರಿಸಬಾರದು. ಗ್ರಾಮ್ಯಧರ್ಮಗಳನ್ನು ಅನುಸರಿಸಬಾರದು. ಮಿತವಾದ ಆಹಾರವನ್ನು ಸೇವಿಸಬೇಕು. ಅಹಿಂಸಾ ಸತ್ಯ ಅಸ್ತೇಯ ಇತ್ಯಾದಿ ನೈತಿಕ ಧರ್ಮಗಳನ್ನು ನಿಷ್ಠೆಯಿಂದ ಆಚರಿಸಬೇಕು. ಆಸನ ಪ್ರಾಣಾಯಾಮಾದಿಗಳನ್ನು ಆಚರಿಸಬೇಕು. ಇವೆಲ್ಲ ಭಕ್ತಿಯೋಗಕ್ಕೆ ತುಂಬ ಸಹಾಯಕವಾದವು.

ಸ್ವಧರ್ಮಾಚರಣಂ ಶಕ್ತ್ಯಾ ವಿಧರ್ಮಾಚ್ಚ ನಿವರ್ತನಮ್ ।
ದೈವಲಬ್ಧೇನ ಸಂತೋಷಃ ಆತ್ಮ ವಿಚ್ಚರಣಾರ್ಚನಮ್ ॥
ಗ್ರಾಮ್ಯಧರ್ಮನಿವೃತ್ತಿಶ್ಚ ಮೋಕ್ಷಧರ್ಮರತಿಸ್ತಥಾ ।
ಮಿತಮೇಧ್ಯಾದನಂ ಶಶ್ವತ್ ವಿವಿಕ್ತ ಕ್ಷೇತ್ರಸೇವನಮ್ ॥
ಅಹಿಂಸಾ ಸತ್ಯಮಸ್ತೇಯಂ ಯಾವದರ್ಥಪರಿಗ್ರಹಃ ।
ಬ್ರಹ್ಮಚರ್ಯಂ ತಪಃ ಶೌಚಂ ಸ್ವಾಧ್ಯಾಯಃ ಪುರುಷಾರ್ಚನಮ್ ।
ಮೌನಂ ಸದಾಸನಂ ಸ್ಥೈರ್ಯಂ ಪ್ರಾಣಾನಾಂ ಚ ಜಯಃ ಶನೈಃ ।
ಏತೈಃ ಅನ್ಯೈಶ್ಚ ಪಥಿಭಿಃ ಮನೋದುಷ್ಟಮಸತ್ಪಥಮ್ ।
ಬುದ್ಧ್ಯಾಯುಂಜೀತ ಶನಕೈಃ ಜಿತಪ್ರಾಣೋಹಿ ಅತಂದ್ರಿತಃ ॥ (29-2 ರಿಂದ 5,7)

ಸದಾಚಾರವನ್ನು ಆಚರಿಸುವುದರ ಜೊತೆಗೆ ಯೋಗ್ಯಗುರುಗಳನ್ನು ಆಯ್ದುಕೊಳ್ಳುವುದೂ ಅಗತ್ಯ ಎಂದು ಹೇಳಿ ಗುರುಗಳ ಲಕ್ಷಣವನ್ನು ಹೇಳುವನು. ವೇದಾಭ್ಯಾಸವನ್ನು ಮಾಡಿದ ಬ್ರಾಹ್ಮಣನು ಶ್ರೇಷ್ಠನು. ವೇದಗಳ ಅರ್ಥವನ್ನು ತಿಳಿದವನು ಅವನಿಗಿಂತ ಶ್ರೇಷ್ಠನು. ಶಿಷ್ಯರ ಸಂಶಯಗಳನ್ನು ಪರಿಹಾರ ಮಾಡುವವನು ಅವನಿಗಿಂತ ಶ್ರೇಷ್ಠನು. ಅಧ್ಯಯನ ಅಧ್ಯಾಪನಗಳ ಜೊತೆಗೆ ಸ್ವಧರ್ಮಾಚರಣೆ ಮಾಡುವವನು ಶ್ರೇಷ್ಠನು. ಸಂಗತ್ಯಾಗ ಮಾಡಿದವನು ಇವರೆಲ್ಲರಿಗಿಂತಲೂ ಶ್ರೇಷ್ಠನು.

ಬ್ರಾಹ್ಮಣೇಷ್ವಪಿ ವೇದಜ್ಞೋಹಿ ಅರ್ಥಜ್ಞೋಽಪ್ಯಧಿಕಸ್ತತಃ ।
ಅರ್ಥಜ್ಞಾತ್ ಸಂಶಯಚ್ಛೇತ್ತಾ ತತಃ ಶ್ರೇಯಾನ್ ಸ್ವಧರ್ಮಕೃತ್ ।
ಮುಕ್ತಸಂಗಃ ತತೋಽಭೂಯಾನ್ ನ ದೋಗ್ಧಾ ಧರ್ಮಮಾತ್ಮನಃ ॥ (30-31,32)

ಹೀಗೆ ತಾಯಿಯಾದ ದೇವಹೂತಿಗೆ ಸಾಂಖ್ಯ, ಭಕ್ತಿಯೋಗಗಳನ್ನು ಉಪದೇಶಿಸಿ. ತಾಯಿಯ ಅನುಮತಿಯನ್ನು ಪಡೆದು ಕಪಿಲನು ಆಶ್ರಮದಿಂದ ಹೊರಟು ಹೋಗುವನು.

ಸ್ವಮಾತ್ರಾ ಬ್ರಹ್ಮವಾದಿನ್ಯಾ ಕಪಿಲೋऽನುಮತೋಯಯೌ ॥ (34-12)

ದೇವಹೂತಿಯೂ ಕೂಡ ಕಪಿಲರ ಉಪದೇಶದಂತೆ ಭಕ್ತಿಯೋಗವನ್ನು ಆಚರಿಸಿ ಭಗವಂತನನ್ನು ಪಡೆದಳು. ಅವಳು ಸಿದ್ಧಿಯನ್ನು ಪಡೆದ ಸ್ಥಾನವು ಇಂದಿಗೂ ಸಿದ್ಧಕ್ಷೇತ್ರವೆಂದು ಪ್ರಸಿದ್ಧವಾಗಿದೆ.

ಏವಂ ಸಾ ಕಪಿಲೋಕ್ತೇನ ಮಾರ್ಗೇಣಾವಿರಹಂ ಪರಮ್ ।
ಆತ್ಮಾನಂ ಬ್ರಹ್ಮನಿರ್ವಾಣಂ ಭಗವಂತಮವಾಪಹ ॥
ತದ್ ವೀರಾಸೀತ್ ಪುಣ್ಯತಮಂ ಕ್ಷೇತ್ರಂ ತ್ರೈಲೋಕ್ಯವಿಶ್ರುತಮ್ ।
ನಾಮ್ನಾ ಸಿದ್ಧಪದಂ ಯತ್ರ ಸಾ ಸಂಸಿದ್ಧಿಮುಪೇಯುಷೇ ॥ (34-30, 31)

ಇಲ್ಲಿಗೆ ಮೂರನೆಯ ಸ್ಕಂಧವು ಮುಗಿಯಿತು.

ಮಹಾಮಹೋಪಾಧ್ಯಾಯ
ಪ್ರೊ. ಕೆ.ಟಿ. ಪಾಂಡುರಂಗಿ
ದ್ವೈತವೇದಾಂತ ಪ್ರತಿಷ್ಠಾನದ ನಿರ್ದೇಶಕರು

श्रीमद् भागवतम्

तृतीयः स्कन्धः - प्रथमोऽध्यायः

विषयानुक्रमणिका

द्वितीयोऽध्यायः

तृतीयोऽध्यायः

चतुर्थोऽध्यायः

पञ्चमोऽध्यायः

षष्ठोऽध्यायः

सप्तमोऽध्यायः

अष्टमोऽध्यायः

नवमोऽध्यायः

दशमोऽध्यायः

एकादशोऽध्यायः

द्वादशोऽध्यायः

त्रयोदशोऽध्यायः

चतुर्दशोऽध्यायः

पञ्चदशोऽध्यायः

षोडशोऽध्यायः

सप्तदशोऽध्यायः

अष्टादशोऽध्यायः

एकोनविंशोऽध्यायः

विंशोऽध्यायः

एकविंशोऽध्यायः

द्वाविंशोऽध्यायः

त्रयोविंशोऽध्यायः

चतुर्विंशोऽध्यायः

पञ्चविंशोऽध्यायः

षड्विंशोऽध्यायः

सप्तविंशोऽध्यायः

अष्टविंशोऽध्यायः

एकोनविंशोऽध्यायः

त्रिंशोऽध्यायः

एकत्रिंशोऽध्यायः

द्वात्रिंशोऽध्यायः

त्रयस्त्रिंशोऽध्यायः

चतुस्त्रिंशोऽध्यायः